ಕರಾವಳಿ ತರಂಗಿಣಿ

ಕಡಲ ಕಿನಾರೆಯಿಂದ ಕೆಂಪು ಕೋಟೆಯವರೆಗೆ..

ಕನ್ನಡ ವಾರಪತ್ರಿಕೆ

ಸುಭಾಷಿತ:



ತಿನ್ನುವ ಅನ್ನದ ಮೇಲೆ ಅಹಂಕಾರ ಪಟ್ಟರೆ..
ರೋಗ ರುಜಿನದಿಂದ ಬಳಲುತ್ತಾನೆ..
ಹೆಣ್ಣನ್ನು ತಿರಸ್ಕಾರ ಭಾವದಿಂದ ನೋಡಿದರೆ
ಬ್ರಹ್ಮಚಾರಿಯಾಗಿಯೇ ಉಳಿಯುತ್ತಾನೆ..
ಒದಗಿ ಬಂದ ಸಂಪತ್ತನ್ನು ಕಡೆಗಣಿಸಿದರೆ
ದರಿದ್ರನಾಗಿಯೇ ಇರುತ್ತಾನೆ..
ಕಾಯಕದ ಮೇಲೆ ಪ್ರೀತಿ ತೋರದಿದ್ದರೆ
ನಿರುದ್ಯೋಗಿಯಾಗಿಯೇ ಬಾಳುತ್ತಾನೆ..
ಕುಟುಂಬ ಸಂಸಾರದಲ್ಲಿ ಒಲವು ಇಲ್ಲದಿದ್ದರೆ
ಅನಾಥನಾಗಿಯೇ ಉಳಿಯುತ್ತಾನೆ.
ಭಗವಾನ್ ಶ್ರೀಕೃಷ್ಣ

PRGI No: KNKAN/25/A2498 www.karavalitharangini.com KARAVALI THARANGINI KANNADA Weekly Dakshina Kannada ದಿನಾಂಕ: 13-11-2026 to 19-11-2026 ಬೆಲೆ:10-00 ಸಂಪುಟ–2 ಸಂಚಿಕೆ–07 ಪುಟಗಳು–6

KANFIDA

ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘ(ರಿ)

ಇದು ಎಸ್ ಆರ್ ಪುಟ್ಟಣ್ಣ ಕಣಗಾಲ್ ಅವರು ಮತ್ತು ಹಿರಿಯ ನಿರ್ದೇಶಕರು ಕಟ್ಟಿರುವ ಸಂಸ್ಥೆ



ಬನ್ನಿ ಚಲನಚಿತ್ರ ನಿರ್ದೇಶಕರೇ ಸದಸ್ಯರಾಗೋಣ

KARNATAKA FILM DIRECTOR'S ASSOCIATION (R)
No-10, 'A' 1st Floor, N S Bhavan,
4th cross, 4th main, Gandhinagar, Bangaloru-560009
Phone: 080-48664455 mob- 74111 96766
email: kanfida2023@gmail.com
ಕನ್ನಡ ಬಳಸಿ ಚಿತ್ರರಂಗ ಉಳಿಸಿ

ಕ್ಷಣ ಕ್ಷಣದ ಸುದ್ದಿಗಳಿಗಾಗಿ
ಕರಾವಳಿ ತರಂಗಿಣಿ
ಪತ್ರಿಕಾ ಬಳಗದಿಂದ
ಅಂತರ್ಜಾಲ ಮಾಧ್ಯಮ

www.karavalitharangini.com

ಕರಾವಳಿ ತರಂಗಿಣಿ
ಮಂಗಳೂರು



ಇಂದಿನ ಡಿಜಿಟಲ್ ಯುಗದಲ್ಲಿ ಮೊಬೈಲ್ ವ್ಯಸನಕ್ಕೆ ಬಲಿಯಾಗುತ್ತಿರುವ ಮಕ್ಕಳ ಬಾಲ್ಯ ಕಮರಿಹೋಗುತ್ತಿದೆ. ಆಟದ ಮೈದಾನಗಳು ಬರಿದಾಗಿ, ಕಣ್ಣುಗಳ ದೃಷ್ಟಿ ಮಂದವಾಗುತ್ತಿದೆ. ಓದು, ನೆನಪಿನ ಶಕ್ತಿ ಹಾಗೂ ಸಾಮಾಜಿಕ ಒಡನಾಟ ಕುಂಟಿತಗೊಳ್ಳಲು ಸ್ಮಾರ್ಟ್‌ಫೋನ್‌ಗಳ ಅತಿ ಬಳಕೆಯೇ ಕಾರಣ. ಪೋಷಕರೇ ಗಮನಿಸಿ ಮಕ್ಕಳ ಕೈಗೆ ಮೊಬೈಲ್ ಬದಲು ಮಣ್ಣಿನಾಟ ಕಲಿಸಿ, ಅವರೊಂದಿಗೆ ಸಮಯ ಕಳೆಯುವ ಅಗತ್ಯವಿದ್ದು, ಅವರ ಬಾಲ್ಯವನ್ನು ಮರಳಿಕೊಡಬೇಕಾಗಿದೆ.

ಮಂಗಳೂರಿನಲ್ಲಿ ಇಂಧನ ಭದ್ರತೆಯ ಹೊಸ ಕವಚ



ಮಂಗಳೂರು: ಭಾರತದ ಪಶ್ಚಿಮ ಕರಾವಳಿಯ ಹೆಬ್ಬಾಗಿಲು ಮಂಗಳೂರು, ದೇಶದ ಇಂಧನ ಭದ್ರತೆ ಮತ್ತು ಸ್ವಾವಲಂಬನೆಯ ಇತಿಹಾಸದಲ್ಲಿ ಇಂದು ಮತ್ತೊಂದು ಸುವರ್ಣ ಅಧ್ಯಾಯವನ್ನು ಬರೆದಿದೆ. ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಲೋಕಾರ್ಪಣೆಗೊಳಿಸಿದ ದೇಶದ ಅತಿ ದೊಡ್ಡ ಭೂಗತ ಎಲ್‌ಪಿಜಿ ಸಂಗ್ರಹಣಾ ಘಟಕವು ಕೇವಲ ಒಂದು ಕೈಗಾರಿಕಾ ಯೋಜನೆಯಾಗಿ ಉಳಿಯದೆ, ದಕ್ಷಿಣ ಭಾರತದ ಕೋಟ್ಯಂತರ ಮನೆಗಳ ಅಡುಗೆ ಮನೆಗೆ ನಿರಂತರ ಇಂಧನ ಪೂರೈಸುವ ಅಭೇದ್ಯ ಕೋಟೆಯಾಗಿ 3ನೇ ಪುಟಕ್ಕೆ

ರಾಜಕೀಯದಲ್ಲಿ ಈಜುವುದು ಸುಲಭವಲ್ಲ –ಡಿಕೆಶಿ

ಮೈಸೂರು: ರಾಜಕಾರಣದಲ್ಲಿ ಈಜುವುದು ಸುಲಭವಲ್ಲ. ಈಜಿದಡ ಸೇರುವುದು ಬಹಳ ಕಷ್ಟ. ಆದರೂ ದೊಡ್ಡ ಸಾಧನೆಗಳನ್ನು ಮಾಡಲು ಪ್ರಯತ್ನಿಸಿದ್ದೇವೆ" ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು. ಮೈಸೂರಿನ ಮಾನಸ ಗಂಗೋತ್ರಿಯ ಸೆನೆಟ್ ಭವನದಲ್ಲಿ ಬುಧವಾರ ನಡೆದ ಸಂಶೋಧಕಿ ರಮ್ಯಾ ವಿರಚಿತ 'ಚಲಿಸುವ ಬಂಡೆ' ಕೃತಿ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದ ಅವರು, ನನ್ನ ಅಧಿಕಾರದ ಅವಧಿಯಲ್ಲಿ ಜನರ ಹೃದಯದಲ್ಲಿ ಉಳಿಯುವಂತಹ ಕೆಲಸ ಮಾಡುತ್ತೇನೆ ಎಂದರು. ನನ್ನ ಮೇಲೆ ಅನೇಕ ಶ್ರೀಗಳು, ಜನರು ಹಾಗೂ ಪಕ್ಷದ ನಾಯಕರು ವಿಶ್ವಾಸವಿಟ್ಟಿದ್ದಾರೆ. ಆ ವಿಶ್ವಾಸಕ್ಕೆ ತಕ್ಕಂತೆ ಬದುಕನ್ನು ಕಟ್ಟಿಕೊಂಡು ಹೋಗುತ್ತೇನೆ. ಸಿದ್ದರಾಮಯ್ಯ ಅವರೊಂದಿಗೆ ಕೆಲಸ ಮಾಡಿದ್ದೇನೆ. ಅವರಿಗೆ ಮಾತ್ರವಲ್ಲ, ಯಾರಿಗೂ ಕೆಟ್ಟದ್ದನ್ನು ಬಯಸುವ ವ್ಯಕ್ತಿ 3ನೇ ಪುಟಕ್ಕೆ



ಬರದಲ್ಲಿ ರಾಜಕೀಯ ಬೇಡ: ಬೊಮ್ಮಾಯಿ



ಬೆಂಗಳೂರು: ಬರ ಪರಿಹಾರದ ವಿಚಾರದಲ್ಲಿ ರಾಜ್ಯ ಸರ್ಕಾರ ರಾಜಕೀಯ ಮಾಡುವುದನ್ನು ಬಿಟ್ಟು ಕೂಡಲೇ ರೈತರ ನೆರವಿಗೆ ಧಾವಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹಾಗೂ ಸಂಸದ ಬಸವರಾಜ ಬೊಮ್ಮಾಯಿ ಆಗ್ರಹಿಸಿದ್ದಾರೆ. ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಬರ ಪರಿಹಾರ ಮತ್ತು ನಮ್ಮ ಮೆಟ್ರೊ ಯೋಜನೆಗೆ ಸಂಬಂಧಿಸಿದಂತೆ ಪ್ರಮುಖ ವಿಷಯಗಳನ್ನು ಹಂಚಿಕೊಂಡಿದ್ದಾರೆ. ಬರ ಪರಿಹಾರ ಬಿಡುಗಡೆ ಮಾಡಲು ಅದರದ್ದೇ ಆದ ನಿರ್ದಿಷ್ಟ ಮಾನದಂಡಗಳಿವೆ. ರಾಜ್ಯದ 3ನೇ ಪುಟಕ್ಕೆ

ಶುಭಾಶಯಗಳೊಂದಿಗೆ...

ಎಸ್‌ಸಿಡಿಸಿಸಿ ಬ್ಯಾಂಕ್



112 ವರ್ಷಗಳ ಸಾರ್ಥಕ ಸೇವೆಯಲ್ಲಿ...

ಪೂರ್ಣ ಭರವಸೆಯ ₹21,000 ಕೋಟಿ ವ್ಯವಹಾರ

ಡಾ। ಎಂ.ಎನ್. ರಾಜೇಂದ್ರ ಕುಮಾರ್
ಅಧ್ಯಕ್ಷರು


ಡಿಜಿಟಲ್ ಬ್ಯಾಂಕಿಂಗ್
ಯುಪಿಐ ಮತ್ತು ಐಎಂಪಿಎಸ್ ಸೌಲಭ್ಯ



ಠೇವಣಿಗಳಿಗೆ ಆಕರ್ಷಕ ಬಡ್ಡಿದರ
ಠೇವಣಿಗಳು RBIನ DICGC ವಿಮಾ ಭದ್ರತೆ ಹೊಂದಿರುತ್ತದೆ.
9%*







ಶ್ರೀ ವಿನಯ ಕುಮಾರ್ ಸೂರಿಂಜೆ
ಉಪಾಧ್ಯಕ್ಷರು

ಶ್ರೀ ಕೆ. ಗೋಪಾಲಕೃಷ್ಣ ಭಟ್
ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಪ್ರಭಾರ)

ಹಾಗೂ ಆಡಳಿತ ಮಂಡಳಿ ನಿರ್ದೇಶಕರು

ದಕ್ಷಿಣ ಕನ್ನಡ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ನಿ.
SCDCC BANK LTD.
H.O. MANGALORE
ಪ್ರಧಾನ ಕಛೇರಿ: 'ಉಷ್ಯಪ್ಪ ಸಹಕಾರಿ ಸೌಧ', ಕೊಡಿಯಾಲ್‌ಬೈಲ್, ಮಂಗಳೂರು - 3
ದೂರವಾಣಿ: 0824-2440381, 2440882, 2441341, 2441243

ಸಂಪ್ರದಾಯ

ಕರ್ವಾ ಚೌತ್



ಉತ್ತರ ಮತ್ತು ಪಶ್ಚಿಮ ಭಾರತದ ಹಿಂದೂ ಮಹಿಳೆಯರು ಅಶ್ವಿಜ ಮಾಸದ ಹುಣ್ಣಿಮೆ ನಂತರ ನಾಲ್ಕನೇ ದಿನದಂದು ಆಚರಿಸುವ ಹಬ್ಬವೇ ಕರ್ವಾ ಚೌತ್. ವಿವಾಹಿತ ಮಹಿಳೆಯರು ವಿಶೇಷವಾಗಿ ತಮ್ಮ ಗಂಡನ ಸುರಕ್ಷತೆ ಮತ್ತು ದೀರ್ಘಾಯುಷ್ಯಕ್ಕಾಗಿ ಸೂರ್ಯೋದಯದಿಂದ ಚಂದ್ರೋದಯದವರೆಗೆ ಉಪವಾಸವನ್ನು ಆಚರಿಸುತ್ತಾರೆ. ಕರ್ವಾ ಚೌತ್ ಉಪವಾಸವನ್ನು ಸಾಂಪ್ರದಾಯಿಕವಾಗಿ ದೆಹಲಿ, ಹರಿಯಾಣ, ರಾಜಸ್ಥಾನ, ಪಂಜಾಬ್, ಜಮ್ಮು, ಮಧ್ಯಪ್ರದೇಶ, ಉತ್ತರ ಪ್ರದೇಶ, ಹಿಮಾಚಲ ಪ್ರದೇಶ ರಾಜ್ಯಗಳಲ್ಲಿ ಆಚರಿಸಲಾಗುತ್ತದೆ. ಸಂಸ್ಕೃತ ಗ್ರಂಥಗಳಲ್ಲಿ ಈ ಹಬ್ಬವನ್ನು ಕಾರ್ಕ ಚತುರ್ಥಿ ಎಂದೂ ಕೂಡ ಸಂಬೋಧಿಸಲಾಗಿದೆ. ಕರ್ವಾ ಚೌತ್‌ಗೆ ಕೆಲವು ದಿನಗಳ ಮೊದಲು, ವಿವಾಹಿತ ಮಹಿಳೆಯರು ಗೋಲಾಕಾರದ ಮಣ್ಣಿನ ಮಡಕೆಗಳನ್ನು ಖರೀದಿಸಿ, ಅವುಗಳ ಹೊರಭಾಗದಲ್ಲಿ ಸುಂದರವಾದ ಚಿತ್ರ ಬಿಡಿಸಿ, ಒಳಗೆ ಬಳೆಗಳು ಮತ್ತು ರಿಬ್ಬನ್‌ಗಳನ್ನು ಹಾಕುತ್ತಾರೆ. ಮನೆಯಲ್ಲಿ ಮಿಠಾಯಿ ಮತ್ತು ಸಿಹಿತಿಂಡಿಗಳನ್ನು ತಯಾರಿಸಿ, ನಂತರ ಕರ್ವಾ ಚೌತ್ ದಿನದಂದು ಒಬ್ಬರಿಗೊಬ್ಬರು ಭೇಟಿ ನೀಡಿ ಕರ್ವಾಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ಪಾಲಕರು ತಮ್ಮ ವಿವಾಹಿತ ಹೆಣ್ಣು ಮಕ್ಕಳಿಗೆ ಉಡುಗೊರೆಗಳನ್ನು ಕಳುಹಿಸುತ್ತಾರೆ. ಹಿಂದಿನ ಕಾಲದಲ್ಲಿ ಉಪವಾಸದ ದಿನ ಗೌರ್ ಮಾತೆಯ ವಿಗ್ರಹವನ್ನು ಮಣ್ಣು ಮತ್ತು ಗೋವಿನ ಸಗಣಿ ಬಳಸಿ ತಯಾರಿಸಲಾಗುತ್ತಿತ್ತು. ಈಗ ಅದನ್ನು ಪಾರ್ವತಿಯ ವಿಗ್ರಹದಿಂದ ಬದಲಾಯಿಸಲಾಗಿದೆ. ಪ್ರತಿಯೊಬ್ಬ ಉಪವಾಸ ವ್ರತದ ಮಹಿಳೆ ಈ ದಿನ ಕರ್ವಾ ಕಥೆಯನ್ನು ಕೇಳುತ್ತಾ ಮಣ್ಣಿನ ದೀಪವನ್ನು ಬೆಳಗಿಸುತ್ತಾಳೆ. ಮಹಿಳೆಯರು ಚಂದ್ರನ ಉದಯಕ್ಕಾಗಿ ಕಾದು, ಚಂದ್ರನು ಕಾಣಿಸಿಕೊಂಡ ನಂತರ, ಉಪವಾಸದ ಮಹಿಳೆಯು ಚಂದ್ರನನ್ನು ಅಥವಾ ಅದರ ಪ್ರತಿಬಿಂಬವನ್ನು ನೀರಿನಿಂದ ತುಂಬಿದ ಪಾತ್ರೆಯಲ್ಲಿ, ಜರಡಿ ಮೂಲಕ ಅಥವಾ ದುಪಟ್ಟಾ ಬಟ್ಟೆಯ ಮೂಲಕ ವೀಕ್ಷಿಸುವುದು ರೂಢಿಯಾಗಿದೆ. ನಂತರ ಮಹಿಳೆ ತನ್ನ ಗಂಡನ ಮುಖವನ್ನು ಜರಡಿ ಮೂಲಕ ನೋಡುತ್ತಾಳೆ.

ಸಂಪಾದಕೀಯ

ಕರಾವಳಿ ತರಂಗಿಣಿ

ಜಗವೆನ್ನ ಮುದ್ದಿಸಬೇಕೆಂದು ಕೊರಗದಿರು...


– ಲಲಿತಶ್ರೀ ಪ್ರೀತಮ್ ರೈ



ಹುಲ್ಲಾಗು ಬೆಟ್ಟದಡಿ, ಮನೆಗೆ ಮಲ್ಲಿಗೆಯಾಗು ಕಲ್ಲಾಗು ಕಷ್ಟಗಳ ಮಳೆಯ ವಿಧಿ ಸುರಿಯೆ, ಬೆಲ್ಲ ಸಕ್ಕರೆಯಾಗು ದೀನ ದುರ್ಬಲರಿಂಗೆ, ಎಲ್ಲರೊಳಗೊಂದಾಗು ಮಂಕುತಿಮ್ಮ. ಡಿ.ವಿ. ಗುಂಡಪ್ಪನವರ ಮಂಕುತಿಮ್ಮನ ಕಗ್ಗದ ಅದ್ಭುತ ಸಾಲುಗಳು. ಈ ಸಾಲುಗಳಲ್ಲಿ ಅದೆಷ್ಟು ಅರ್ಥವಿದೆ. ಪ್ರತಿಯೊಬ್ಬ ಮನುಷ್ಯನು ತನ್ನ ಅಸ್ತಿತ್ವದಿಂದ ಇತರರಿಗೆ ಪ್ರಯೋಜನವಾಗುವಂತೆ ಬದುಕಬೇಕು ಎನ್ನುವುದನ್ನು ಅದೆಷ್ಟು ಅರ್ಥಗರ್ಭಿತವಾಗಿ ಬಣ್ಣಿಸಿದ್ದಾರೆ. ನಮ್ಮ ಅಸ್ತಿತ್ವ ಇತರರನ್ನು ಮತ್ತೆ ಮತ್ತೆ ಕಾಡುವಂತಿರಬೇಕು. ಆದರೆ ನಾವು ಎಲ್ಲರೊಳಗೊಂದಾಗಿ ಬದುಕಿದಾಗ ಮಾತ್ರ ನಮ್ಮ ಅಸ್ತಿತ್ವ ಮತ್ತೆ ಮತ್ತೆ ಕಾಡಲು ಸಾಧ್ಯ. ಅದನ್ನು ಬಿಟ್ಟು, ನಾನು ಎನ್ನುವ ಅಹಂನಲ್ಲಿ ಎಲ್ಲರಿಂದ ದೂರದಲ್ಲಿ, ನಾನೇ ಬೇರೆ, ನಾನು ಮಾತ್ರ ಶ್ರೇಷ್ಠ, ಎನ್ನುವ ಹಾಗೇ ಬದುಕುವುದರ ಬದಲು ಈ ಜಗವೇ ನನ್ನದು, ಇಲ್ಲಿರುವವರೆಲ್ಲಾ ನನ್ನವರು ಅಂತ ಬದುಕುವುದನ್ನು ನಾವು ಕಲಿಯಬೇಕು. ಆಗ ಮಾತ್ರ ನಮ್ಮ ಅಸ್ತಿತ್ವ ಈ ಸಮಾಜವನ್ನು ಅಥವಾ ಇನ್ನೊಬ್ಬ ಮನುಷ್ಯನನ್ನು ಕಾಡಲು ಸಾಧ್ಯ. ನಾವು ಮಾಡುವ ಕಾರ್ಯದಿಂದ ಎಲ್ಲರನ್ನು ಮೆಚ್ಚಿಸಲು ಸಾಧ್ಯವಿಲ್ಲವಾದರೂ ನಮ್ಮ ಆತ್ಮಕ್ಕಾದರೂ ಮೆಚ್ಚುಗೆಯಾಗುವಂತಿರಬೇಕು. ಕೆಲವರಂತೂ ಮುಖದಲ್ಲೊಂದು ಮುಗಳ್ನಗೆ ಬೀರಲೂ ಹಿಂದೆ ಮುಂದೆ ನೋಡುತ್ತಾರೆ, ಮಾತಾಡಿಸಲೂ ಹಿಂಜರಿಯುತ್ತಾರೆ. ಎಲ್ಲರ ವ್ಯಕ್ತಿತ್ವ ಒಂದೇ ರೀತಿಯಲ್ಲಿ ಇರಲು ಸಾಧ್ಯವಿಲ್ಲ ನಿಜ. ಆದರೂ ನಾವು ಎಲ್ಲರೊಡನೆ ಬೆರೆಯಬೇಕು. ಇಲ್ಲವಾದರೆ ಬಾವಿಯ ಕಪ್ಪೆಯಾಗಿ ಬಿಡುತ್ತೇವೆ. ಅದರ ಬದಲು ನಮ್ಮ ವ್ಯಕ್ತಿತ್ವಕ್ಕೆ ಸ್ವಲ್ಪ ಸಾಣೆ ಹಿಡಿದು, ಬದಲಾದರೆ ನೀಲ ಕಡಲಲ್ಲೇ ವಿಹರಿಸಬಹುದು ಅಲ್ಲವೇ? ಅದು ಹೇಗೆ ಯಾವ ರೀತಿಯಲ್ಲಿ ನಮ್ಮ ವ್ಯಕ್ತಿತ್ವವನ್ನು ಎಲ್ಲಾರಿಗೂ ಹೊಂದುವ ಹಾಗೆ ಬದಲಾಯಿಸಿಕೊಳ್ಳಬಹುದು ಎನ್ನುವುದೇ ಮುಖ್ಯವಾಗಿರುತ್ತದೆ. ಎಲ್ಲರೊಂದಿಗೂ ಪ್ರೀತಿಯಿಂದಲೇ ಮಾತನಾಡಿಸಿ. ಮನದೊಳಗಿನ ಅಹಂಕಾರ, ತಾನು ಮೇಲು, ಇತರರೆಲ್ಲಾ ಕೀಳು, ಅವರ ಜತೆ ನಾನ್ಯಾಕೆ ಮಾತನಾಡಿಸಲಿ, ಅವರು ಕೆಳಗಿನ ಹುದ್ದೆಯಲ್ಲಿರುವವರು, ನನ್ನ ಸ್ಥಾನವೇ ಬೇರೆ ಎಂಬೆಲ್ಲಾ ಮನಸ್ಥಿತಿಗಳು ವ್ಯಕ್ತಿಯನ್ನು ದೂರ ಇರಿಸುವಂತೆ ಮಾಡುತ್ತದೆ. ಅವರವರ ವ್ಯಕ್ತಿತ್ವ, ಮಾತು, ಹಾವಭಾವ, ಉಡುಗೆ ತೊಡುಗೆ, ಅವರ ಬಣ್ಣ, ಸಮುದಾಯ, ಯಾವುದನ್ನೂ ಅವರು ಹೀಗೇ ಎಂದು ನಿರ್ಧರಿಸುವ ಪ್ರಯತ್ನ ಮಾಡಬಾರದು. ಮುಖದಲ್ಲೊಂದು ಮುಗಳ್ನಗು, ಎದುರಿಗಿರುವವರ ಮಾತುಗಳನ್ನು ಗಮನವಿಟ್ಟು ಕೇಳುವುದು ಕೂಡಾ ನಮ್ಮಲ್ಲಿರುವ ಪ್ರಜ್ಞೆಯನ್ನು ತೋರಿಸುತ್ತದೆ. ಇತರರ ಭಾವನೆಗಳನ್ನು ಸ್ವತಃ ಅನುಭವಿಸುವ ರೀತಿಯಲ್ಲಿ ಪ್ರತಿಕ್ರಿಯಿಸುವುದರಿಂದ ಅವರಿಗೂ ಖುಷಿಯ ಭಾವ ಬರುತ್ತದೆ. ಬದುಕಿನ ಬಗ್ಗೆ ನಿರಾಶಾಭಾವವನ್ನು ಯಾವತ್ತೂ ವ್ಯಕ್ತಪಡಿಸಬಾರದು. ಯಾವುದೇ ಸಂದರ್ಭ ಅಥವಾ ಘಟನೆಗೆ ನೀಡುವ ಪ್ರತಿಕ್ರಿಯೆ ಆಶಾವಾದವನ್ನು ಮೂಡಿಸುವಂತಿರಬೇಕು. ಅಂದರೆ ನಮ್ಮ ಮಾತುಗಳು ಇನ್ನೊಬ್ಬ ವ್ಯಕ್ತಿಯಲ್ಲಿ ಸಕಾರಾತ್ಮಕ ಭಾವವನ್ನು ಮೂಡಿಸಬೇಕು. ಸಕಾರಾತ್ಮಕ ಸಮಾಧಾನ ನೀಡುವಂತಿರಬೇಕು. ಬದುಕೇ ಬೇಡ ಎನ್ನುವವನಿಗೆ ಆ ಕ್ಷಣ ಬದುಕುವ ಆಶಾಭಾವ ಮೂಡಿಸಬೇಕು. ಹೀಗೆ ಇಂತಹ ಗುಣಗಳು ಆ ವ್ಯಕ್ತಿಯನ್ನು ಇಷ್ಟಪಡುವಂತೆ ಮಾಡುತ್ತದೆ. ಸಿಡುಕು ಸ್ವಭಾವ ಎಂದಿಗೂ ಯಾರಿಗೂ ಇಷ್ಟವಾಗದು. ನಮ್ಮಲ್ಲಿ ಉದಾರತೆ ಇರಬೇಕು. ನಮ್ಮಿಂದ ಇನ್ನೊಂದು ಜೀವಕ್ಕೆ ಉಪಕಾರ ಆಗದಿದ್ದರೂ ಅಪಕಾರವಂತೂ ಆಗಲೇಬಾರದು. ಜಗತ್ತಿನಲ್ಲಿ ಪ್ರಯೋಜಕರಾಗಿ ಬದುಕಬೇಕೆನ್ನುವುದು ನಮ್ಮ ಸಂಸ್ಕೃತಿಯ ಸಂಸ್ಕಾರದ ಆಶಯವಾಗಿರಬೇಕು. ಅದಕ್ಕೆ ಡಿವಿಜಿಯವರು ಬೆಟ್ಟದ ಅಡಿಯಲ್ಲಿರುವ ಹುಲ್ಲಿನಂತಿರು, ಆ ಹುಲ್ಲನ್ನು ಹಸು ಕರುಗಳು ಕೂಡ ತಿಂದು ತೃಪ್ತಿ ಪಡುವಂತಿರಲಿ. ನಿನ್ನ ಮನೆಗೆ ನೀನು ಸುಗಂಧ ಬೀರುವ ಮಲ್ಲಿಗೆಯಂತಿರು, ಎಲ್ಲರೂ ನಿನ್ನ ಎದುರು ನೋಡುವಂತಿರಲಿ. ಅದನ್ನು ಬಿಟ್ಟು ಊರಿಗೆ ಉಪಕಾರಿ ಮನೆಗೆ ಮಾರಿಯಂತಾಗಬಾರದು. ಕಷ್ಟಗಳ ಮಳೆಯನ್ನೇ ವಿಧಿ ನಿನ್ನ ಮೇಲೆ ಸುರಿಸಿದಾಗಲೂ ಅಂಜದೆ, ಕಂಗಾಲಾಗದೆ ಕಲ್ಲಿನಂತೆ ದೃಢವಾಗಿರು. ಈ ಜಗದಲ್ಲಿ ಯಾರಿಗಿಲ್ಲ ಕಷ್ಟ, ಆದರೆ ಆ ಕಷ್ಟಗಳ ಭಾರದಿಂದ ಕುಗ್ಗುವವರೇ ಹೆಚ್ಚು. ಹಾಗೆ ಕುಗ್ಗಿದ ಮನಸ್ಸು ಸಕ್ರಿಯಾತ್ಮಕವಾಗಿಲ್ಲದೆ, ಬಾಡಿದಾಗ ಜೀವನ ನೀರಸವಾಗುತ್ತದೆ. ಹಾಗೆ ಕುಗ್ಗದೆ ಬಂದದ್ದನ್ನೆಲ್ಲಾ ಅನುಭವಿಸಿಯೇ ತೀರಿಸುತ್ತೇನೆ ಎಂದು ಮನಸ್ಸನ್ನು ಕಲ್ಲಿನಂತೆ ಗಟ್ಟಿಯಾಗಿಸಿ, ಮಾನಸಿಕ ಸಮತೋಲನವನ್ನು ಕಳೆದುಕೊಳ್ಳದೆ ದೃಢವಾಗಿ ಮತ್ತು ಧೈರ್ಯವಾಗಿ ನಿಂತರೆ, ಎಂತಹ ಕಷ್ಟಗಳನ್ನೂ ಎದುರಿಸುವ, ಅನುಭವಿಸುವ ಮತ್ತು ಗೆದ್ದು ಹೊರಬರುವ ಸಾಧ್ಯತೆಗಳು ಅಧಿಕ. ನಮ್ಮ ಕಷ್ಟವನ್ನು ನಮಗಿಂತ ತೀರ ಹೀನ ಗತಿಯಲ್ಲಿರುವ ದೀನರ ಮತ್ತು ದೈನ್ಯರ ಕಷ್ಟಗಳಿಗೆ ಹೋಲಿಸಿಕೊಂಡಾಗ, ನಮ್ಮದು ಗೌಣವಾಗುತ್ತದೆ. ಆ ಕಷ್ಟಗಳು ನಿನ್ನನ್ನು ಏನೂ ಮಾಡಲು ಸಾಧ್ಯವಿಲ್ಲ. ದೀನ ದುರ್ಬಲರಿಗೆ ಆಸರೆಯನ್ನು ಕೊಡುವ ಸಿಹಿಯಾಗು. ಏಕಾತ್ಮಭಾವದಿಂದ ಪರರ ಸಂತೋಷವನ್ನು ನಮ್ಮ ಸಂತೋಷವೆಂದುಕೊಳ್ಳುತ್ತಾ, ಪರರ ನೋವನ್ನು ಹಂಚಿಕೊಳ್ಳುತ್ತಾ ಎಲ್ಲರೊಳಗೆ ಒಂದಾಗಿ ಬದುಕಿದರೆ ಒಂದು ಧನ್ಯತೆಯ ಭಾವ ನಮ್ಮ ಮನಸ್ಸಿಗೆ ಬಂದರೆ ನಮ್ಮ ಆತ್ಮಕ್ಕೂ ತೃಪ್ತಿ ಸಿಗುತ್ತದೆ. ಆತ್ಮ ತೃಪ್ತನಾದರೆ ಅದಕ್ಕಿಂತ ಮಿಗಿಲಾದ ಸನ್ಮಾನವಿಲ್ಲ. ಒಟ್ಟಿನಲ್ಲಿ ಎಲ್ಲಾ ಸಂದರ್ಭದಲ್ಲೂ, ಎಲ್ಲಾ ಸನ್ನಿವೇಶಗಳಲ್ಲೂ ಬೆರೆತು ಒಂದಾಗಿರು ಎಂದು ಗುಂಡಪ್ಪನವರು ಹೇಳುತ್ತಾರೆ. ಮುಂದೆ "ಜಗವೆನ್ನ ಮುದ್ದಿಸಬೇಕೆಂದು ಕೊರಗದಿರು" ಜಗದೊಳಗಿರುವ ಜನರೆಲ್ಲ ನನ್ನನ್ನು ಪ್ರೀತಿಸಬೇಕು, ಎಂದು ಅಪೇಕ್ಷೆಪಟ್ಟು, ಅದು ಆಗದಿದ್ದಾಗ ನೀನು ಕೊರಗಬೇಡ. ನಿನ್ನ ಹೆತ್ತವರಿಗೆ ನೀನು ಮಗು, ಆದರೆ ಲೋಕಕ್ಕೆ ಪ್ರತಿಸ್ಪರ್ಧಿ. ಹುಟ್ಟಿದವರಿಗೆಲ್ಲಾ ಅವರವರ ಬಾಳಿನ ಹೊರೆ ಇದ್ದೇ ಇರುತ್ತದೆ. ನಿನ್ನ ಬಗ್ಗೆ ತಲೆಕೆಡಿಸಿಕೊಳ್ಳಲು ಯಾರಿಗೂ ಬಿಡುವಿರುವುದಿಲ್ಲ ಅನ್ಯರ ಭಾರವನ್ನು ಯಾರೂ ತೆಗೆದುಕೊಳ್ಳಲೂ ಆಗುವುದಿಲ್ಲ. ಹಾಗೆ ತೆಗೆದುಕೊಳ್ಳಲಾದರೆ ಅವರೇ ಪುಣ್ಯವಂತರು ಎನ್ನುತ್ತಾರೆ ಡಿವಿಜಿಯವರು. ಹಿರಿಯರ ಇಂತಹ ಹಿತನುಡಿಗಳನ್ನು ಅರಿತು, ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು, ನಮ್ಮ ಮುಂದಿನ ಪೀಳಿಗೆ ಒಳ್ಳೆ ದಾರಿಯಲ್ಲಿ ಮುನ್ನಡೆಯಲು ನಾವು ದಾರಿ ದೀಪವಾಗೋಣ.

ವೈದ್ಯೋನಾರಾಯಣೋ ಹರಿಃ

ಹಿಪ್ಪೆ



ಇಂಗ್ಲೀಷ್‌ನಲ್ಲಿ ಹನಿ ಟ್ರೀ ಎಂದು ಕರೆಸಿಕೊಳ್ಳುವ ಹಿಪ್ಪೆ ಮರವನ್ನು ತುಳುವಿನಲ್ಲಿ ನಾನಿಲ್ ಎಂದು ಕರೆಯುತ್ತಾರೆ. ಹೊಳೆಯ ಸಮೀಪದಲ್ಲಿ ಹೆಚ್ಚಾಗಿ ಬೆಳೆಯುವ ಆ ಮರವನ್ನು ಬಸ್ತಾರ್‌ನ ಆದಿವಾಸಿಗಳು ಮತ್ತು ಮಧ್ಯಪ್ರದೇಶದ ಗೊಂಡ ಆದಿವಾಸಿಗಳು ಪೂಜಿಸುತ್ತಾರೆ. ಹಿಂದೆ ಹಿಪ್ಪೆ ಹಣ್ಣಿನಿಂದ ಆದಿವಾಸಿಗಳು ಹೆಂಡವನ್ನು ತಯಾರಿಸುತ್ತಿದ್ದರಂತೆ. ಬೆಣ್ಣೆ ಹಣ್ಣಿನ ಬೀಜದಂತಿರುವ ಹಿಪ್ಪೆ ಬೀಜದಿಂದ ಎಣ್ಣೆ ತೆಗೆದು ಕೆಲವು ಕಡೆಗಳಲ್ಲಿ ಅಡುಗೆಗೆ ಉಪಯೋಗಿಸುತ್ತಾರೆ. ಗೊಂಡ ಆದಿವಾಸಿಗಳಲ್ಲಿ ಚಳಿಗಾಲದಲ್ಲಿ ಮಗು ಜನಿಸಿದರೆ, ತಾಯ ಹಾಲಿಗೂ ಮೊದಲು ಹಿಪ್ಪೆ ಹಣ್ಣಿನ ರಸವನ್ನು ನೆಕ್ಕಿಸುತ್ತಾರೆ. ಹಿಪ್ಪೆ ಹೂ ಸಿಹಿಯಿಂದ ಕೂಡಿದ್ದು ಬಹಳ ರುಚಿಕರವಾಗಿರುತ್ತದೆ. ಮಕ್ಕಳು ಇದನ್ನು ತುಂಬಾ ಇಷ್ಟಪಟ್ಟು ತಿನ್ನುತ್ತಾರೆ. ನಾನಿಲ್ ಹೂ ಅರಳುವ ಸಮಯಕ್ಕೆ ಕೋಗಿಲೆಗಳಿಗೆ ಗಂಟಲು ನೋವು ಬಂದಿರುತ್ತದೆ ಎನ್ನುವ ಮಾತು ತುಳುನಾಡಿನಲ್ಲಿ ಪ್ರಚಲಿತದಲ್ಲಿದೆ. ಹಿಪ್ಪೆ ಬೀಜದ ಎಣ್ಣೆಯನ್ನು ಸಾಬೂನು ಉತ್ಪತ್ತಿ ಮಾಡುವುದಕ್ಕೆ ಉಪಯೋಗಿಸಲಾಗುತ್ತದೆ. ಅಂಗಮರ್ದನ ಮಾಡುವ ಎಣ್ಣೆಯಾಗಿಯೂ ಬಳಸುತ್ತಾರೆ. ಅಷ್ಟೇ ಅಲ್ಲದೆ ಮನೆ ಮದ್ದಿನಲ್ಲೂ ಬಳಸಲಾಗುತ್ತದೆ.

ಹಿಪ್ಪೆ ಬೀಜದ ಎಣ್ಣೆಯು ಶಮನಕಾರಿ ಗುಣಗಳನ್ನು ಹೊಂದಿರುವುದರಿಂದ ಸಂಧಿವಾತ, ಕೀಲುನೋವಿಗೆ ಉತ್ತಮ ಔಷಧಿ.

ಚರ್ಮದ ಕಾಯಿಲೆ ಇದ್ದಾಗ ಹಿಪ್ಪೆ ಬೀಜದ ಎಣ್ಣೆಯನ್ನು ಉಪಯೋಗಿಸಿದರೆ ಚರ್ಮರೋಗ ವಾಸಿಯಾಗುತ್ತದೆ.

ಹಿಪ್ಪೆ ಮರದ ತೊಗಟೆಯ ಕಷಾಯವು ಹೊಟ್ಟೆಯಲ್ಲಿನ ಜಂತು ಹುಳುಗಳನ್ನು ಹೊರ ಹಾಕಲು ಸಹಕಾರಿ.

ಕಷಾಯವು ಸಂಕುಚಿತಗೊಂಡ ಕರುಳಿನ ತೊಂದರೆ ನಿವಾರಣೆ ಎಂದು ಹೇಳಲಾಗುತ್ತದೆ.

ಹಿಪ್ಪೆ ಮರದ ತೊಗಟೆಯ ಕಷಾಯವನ್ನು ಮೂಳೆ ಮುರಿತದ ಚಿಕಿತ್ಸೆಯಲ್ಲಿ ಉಪಯೋಗಿಸಲಾಗುತ್ತದೆ.

ಹಿಪ್ಪೆ ಹೂವುಗಳ ಕಷಾಯವು ಹೃದಯದ ತೊಂದರೆಗಳಿಗೆ ಉಪಯೋಗಿಸಲಾಗುತ್ತದೆ.

ಕಿವಿಯ ತೊಂದರೆಗಳಲ್ಲೂ ಹಿಪ್ಪೆ ಉಪಯೋಗಕಾರಿ

ಶ್ವಾಸಕೋಶದಲ್ಲಿರುವ ಕಫವನ್ನು ನಿವಾರಿಸುತ್ತದೆ

ಕ್ಷೇತ್ರದರ್ಶನ



ಶ್ರೀ ಹಾಸನಾಂಬೆ

ಹಾಸನಾಂಬೆ ದೇವಾಲಯವು ಕರ್ನಾಟಕದ ಜಿಲ್ಲಾ ಕೇಂದ್ರವಾದ ಹಾಸನ ನಗರದಲ್ಲಿದೆ. ಹಾಸನಾಂಬೆಯು ನಗರ ದೇವತೆ ಅದ ಕಾರಣ ಇಲ್ಲಿಗೆ ಹಾಸನ ಎಂಬ ಹೆಸರು ಬಂದಿದೆ. ಮೌರ್ಯರ ನಂತರ ಚೋಳ ಅರಸರ ಅಧಿಪತಿಯಾದ ಬುಕ್ಕ ನಾಯಕ ಮತ್ತು ಅವನ ವಂಶಸ್ಥರು ಹೊಯ್ಸಳರಿಗೂ ಪೂರ್ವ ಕಾಲದಲ್ಲಿ, ಇಮ್ಮಡಿ ಗಂಗರ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತ್ತು. ಬುಕ್ಕ ನಾಯಕನ ನಂತರ 12ನೆಯ ಶತಮಾನದಲ್ಲಿ ಕೃಷ್ಣಪ್ಪ ನಾಯಕ ಎಂಬ ಪಾಳೇಗಾರನಿಗೆ ಸೇರಿತ್ತು. ನಾಯಕ ಒಮ್ಮೆ ಪ್ರಯಾಣ ಹೊರಟಾಗ ಒಂದು ಮೊಲ ಅಡ್ಡ ಬಂದು ಪಟ್ಟಣವನ್ನು ಪ್ರವೇಶಿಸಿತು. ಈ ಅಪಶಕುನದಿಂದ ನಾಯಕ ನೊಂದುಕೊಂಡನಂತೆ. ಆಗ ಅವನಿಗೆ ಹಾಸನಾಂಬೆ ಪ್ರತ್ಯಕ್ಷಳಾಗಿ "ಈ ಸ್ಥಳದಲ್ಲಿ ನನಗೆ ದೇಗುಲ ಕಟ್ಟು, ನಾನು ಹಾಸನಾಂಬೆ ಎಂದೇ ಹೆಸರಿನಲ್ಲಿ ಇಲ್ಲಿ ನೆಲಸುವೆ" ಎಂದಿರುವ ಬಗ್ಗೆ ವೀರಗಲ್ಲಿನ ಶಾಸನದಲ್ಲಿ ಉಲ್ಲೇಖವಿದೆ. ಪುರಾಣ ಕಥೆಯ ಪ್ರಕಾರ, ಸಪ್ತಮಾತೃಕೆಯರು ಕಾಶಿಯಿಂದ ದಕ್ಷಿಣಾಭಿಮುಖವಾಗಿ ವಿಹಾರಕ್ಕೆ ಬಂದಾಗ ಪ್ರಕೃತಿಯ ಸೌಂದರ್ಯಕ್ಕೆ ಮನಸೋತು ಇಲ್ಲೇ ನೆಲೆಸಲು ನಿರ್ಧರಿಸಿದರು. ಅವರುಗಳಲ್ಲಿ ವೈಷ್ಣವಿ, ಕುಮಾರಿ, ಮಹೇಶ್ವರಿಯರು ಹಾಸನಾಂಬ ದೇವಾಲಯದಲ್ಲಿ ಹುತ್ತದ ರೂಪದಲ್ಲಿ ಹಾಗು ಬ್ರಾಹ್ಮೀ ದೇವಿಯು ಕೆಂಚಮ್ಮನ ಹೊಸಕೋಟೆಯಲ್ಲಿ ನೆಲೆಸಿದಳು. ಇನ್ನುಳಿದ ದೇವತೆಯರಾದ ಚಾಮುಂಡಿ, ವರಾಹಿ, ಇಂದ್ರಾಣಿ ನಗರ ಮಧ್ಯಭಾಗದ ದೇವಿಗೆರೆಯ ಬಳಿ ನೆಲೆಸಿದರು ಎನ್ನಲಾಗಿದೆ. ಸಪ್ತಮಾತೃಕೆಯರು ಸದಾ ನಗುವ ದೇವತೆಯರಾಗಿದ್ದಾರೆ ಹಾಗಾಗಿ ನಸುನಗುವ ದೇವತೆಗಳು ನೆಲೆಸಿರುವುದರಿಂದ ಹಸನ, ಹಾಸನವಾಗಿದೆ ಎನ್ನುವ ಮಾತು ಕೂಡ ಇದೆ. ಆದಿಶಕ್ತಿ ಸ್ವರೂಪಿಣಿ ಮಾತೃ ಸ್ವರೂಪಿಣಿಯಾಗಿರುವ ಹಾಸನಾಂಬೆ ಸಿಂಹಾಸನಪುರಿಯ ಅಧಿದೇವತೆ, ಭುವನತಾರಿಣಿ, ಅಸುರ ಸಂಹಾರಿಣಿ. ಬೇಡಿದ ವರಕೊಡುವ ಶಕ್ತಿದೇವತೆಯಾಗಿ ಜನಮಾನಸದಲ್ಲಿ ನೆಲೆ ನಿಂತಿದ್ದಾಳೆ. ಇನ್ನೊಂದು ವಿಶೇಷವೆಂದರೆ ವರುಷಕ್ಕೊಮ್ಮೆ ದೇಗುಲದ ಗರ್ಭಗುಡಿ ತೆರೆಯಲಾಗುತ್ತದೆ. ಕೃಷ್ಣಪ್ಪ ನಾಯಕನ ಕಾಲದಿಂದಲೂ ಆಶ್ವೀಜ ಮಾಸ ಪೌರ್ಣಮಿಯ ನಂತರ ಬರುವ ಗುರುವಾರದಂದು ಹಾಸನಾಂಬೆಯ ದೇವಾಲಯ ತೆರೆಯಲ್ಪಡುತ್ತದೆ. ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಭಕ್ತಾದಿಗಳು ಅಂದು ದರ್ಶನಾಕಾಂಕ್ಷಿಗಳಾಗಿ ಬಂದು ದೇವಿಯ ದರ್ಶನ ಪಡೆಯುತ್ತಾರೆ. ಗರ್ಭಗುಡಿಯಲ್ಲಿ ಹುತ್ತರೂಪಾದಿಯಲ್ಲಿರುವ ಆದಿಶಕ್ತಿಸ್ವರೂಪಿಣಿ ಹಾಸನಾಂಬೆಗೆ ಹಿಂದಿನ ವರುಷ ಹಚ್ಚಿಟ್ಟಿದ್ದ ದೀಪವು ಆರದೇ, ಮುಡಿಸಿದ ಹೂ ಬಾಡದೇ ಹಾಗೂ ನೈವೇದ್ಯಕ್ಕಿಟ್ಟ ಅಕ್ಕಿಯು ಅನ್ನವಾಗಿರುವ ವಿಸ್ಮಯ ದೃಶ್ಯವು ಭಕ್ತಾದಿಗಳನ್ನು ಮೂಕವಿಸ್ಮಿತರನ್ನಾಗಿಸುತ್ತದೆ. ಹಾಸನಾಂಬೆ ದೇವಾಲಯದ ಬಾಗಿಲು ತೆರೆಯುವುದಕ್ಕೂ ಮೊದಲು ಸಾಂಪ್ರದಾಯಿಕ ವಿಧಿ ವಿಧಾನ ಹಾಗೂ ಅರಸು ವಂಶಸ್ಥರು ಬನ್ನಿ ಕಡಿಯುತ್ತಾರೆ. ಗರ್ಭಗುಡಿಯ ಬಾಗಿಲನ್ನು ತೆರೆದ ಕೂಡಲೇ ಭಕ್ತರು ಹಾಸನಾಂಬೆಯ ದರ್ಶನ ಮಾಡಬಾರದು ಅದರಿಂದ ಅಪಾಯವಾಗುವ ಸಾಧ್ಯತೆ ಹೆಚ್ಚಿದೆ ಎನ್ನುವ ನಂಬಿಕೆ ಕೂಡ ಇದೆ.

ಕಾಮಧೇನು

ಪ್ರಕೃತಿಯೇ ನಮಗೆ ದಾರಿ ದೀಪ

@ ಕೃಷ್ಣಾಮೃತ



ಈಶಾನ್ಯ ಭಾರತದ ಸಪ್ತ ಸೋದರಿ ರಾಜ್ಯಗಳಲ್ಲಿ ತ್ರಿಪುರ ಕೂಡ ಒಂದು. ಬೋರೋಮುರಾ, ಅಥರಾಮುರಾ, ಲೋಂಗ್‌ತರೈ, ಶಾಖಾನ್, ಜಾಮ್ ಪುಯಿ ಎಂಬ ಐದು ಬೆಟ್ಟಗಳ ಸಾಲುಗಳು ರಾಜ್ಯದಲ್ಲಿ ಉತ್ತರದಿಂದ ದಕ್ಷಿಣಕ್ಕೆ ಸಾಗುತ್ತವೆ. ಇವುಗಳ ಮಧ್ಯೆ ಅಗರ್ತಲಾ–ಉದಯಪುರ್, ಖೋವಾಯಿ–ತೆಲಿಯಾಮುರಾ, ಕಮಾಲ್ ಪುರಾ, ಅಂಬಾಸಾ, ಕೈಲಾಸ್ ಶಹರ್–ಮಾನು ಧರ್ಮನಗರ್–ಕಾಂಚನ್ಪುರ್ ಕಣಿವೆಗಳಿವೆ. ಕಣಿವೆಗಳ ನಡುವೆ ಇರುವ ಸಮೃದ್ಧ ಕೃಷಿ ಭೂಮಿಗೆ 'ಲುಂಗಾ' ಎಂಬ ಹೆಸರಿದೆ. ಕಣಿವೆಗಳ ನಡುವೆ ಹರಿಯುವ ಹಲವಾರು ನದಿಗಳು ಬಾಂಗ್ಲಾದೇಶಕ್ಕೆ ಸಾಗುತ್ತವೆ. ಗುಮ್ಟಿ ಪಶ್ಚಿಮಕ್ಕೆ ಹರಿದರೆ, ಕೊವ್ವಾ, ಧಾಲೈ, ಮಾನು, ಜುರಿ, ಲಾಂಗಾಯಿ, ಉತ್ತರಕ್ಕೆ ಹರಿಯುತ್ತವೆ. ಮುಹುರಿ, ಮತ್ತು ಫೆನಿ, ನೈರುತ್ಯ ದಿಕ್ಕಿಗೆ ಹರಿಯುತ್ತವೆ. ವಸಂತ ಕಾಲಾವಧಿಯ ಬೆರಗಿನ ಬೆಟ್ಟಗಳೆಂದೇ ಕರೆಯಲ್ಪಡುವ ಜಾಂಪುಯಿ ಬೆಟ್ಟಗಳು, ತ್ರಿಪುರಾ ರಾಜ್ಯದ ಉತ್ತರ ಭಾಗದ ಅತ್ಯಂತ ಸುಂದರವಾದ ತಾಣವಾಗಿದ್ದು, ಬಹುತೇಕ ಮಿಜೋ ಜನಾಂಗದವರೇ ವಾಸಿಸುವ ಹೋಬಳಿಗೆ ಆಶ್ರಯತಾಣವಾಗಿದೆ. ರಾಜ್ಯದ ಗಡಿಭಾಗದಲ್ಲಿ, ಸುಮಾರು 3,200 ಅಡಿಗಳಷ್ಟು ಎತ್ತರವಾದ ಭೂಭಾಗದಲ್ಲಿ ಜಾಂಪುಯಿ ಬೆಟ್ಟಗಳಿರುವುದರಿಂದ, ಜಾಂಪುಯಿ ಬೆಟ್ಟಗಳ ವೀಕ್ಷಕ ತಾಣಗಳು ಮಿಜೋರಾಂನ ಕಣಿವೆಗಳ ಅತ್ಯದ್ಭುತವಾದ ವಿಹಂಗಮ ನೋಟವನ್ನೊದಗಿಸುತ್ತವೆ. ಜಾಂಪುಯಿ ಬೆಟ್ಟಗಳು ತ್ರಿಪುರಾ ರಾಜ್ಯದಲ್ಲಿಯೇ ಅತೀ ಎತ್ತರದ ಬೆಟ್ಟದ ಶ್ರೇಣಿಯಾಗಿದೆ. ಓರ್ಕಿಡ್ ಫಾರ್ಮ್‌ಗಳು, ಚಹಾ ತೋಟಗಳು, ಮತ್ತು ಮಾಲಿನ್ಯ ರಹಿತವಾದ ಹಚ್ಚ ಹಸುರಿನಿಂದೊಡಗೂಡಿರುವ, ಕಣ್ಣು ಕುಕ್ಕುವಂತಹ ಸೊಬಗುಳ್ಳ ಭೂಪ್ರದೇಶವನ್ನು ಜಾಂಪುಯಿ ಬೆಟ್ಟಗಳು ಒಳಗೊಂಡಿದ್ದು, ಇಲ್ಲಿನ ಸ್ಥಳೀಯರ ಸ್ವಚ್ಛವಾದ ಮರದ ಮನೆಗಳು ಜಾಂಪುಯಿ ಬೆಟ್ಟಗಳನ್ನು ಒಂದು ಮಹತ್ತರವಾದ ಪ್ರವಾಸೀ ತಾಣವನ್ನಾಗಿಸುತ್ತವೆ. ಜಾಂಪುಯಿ ಬೆಟ್ಟಗಳ ಇಳಿಜಾರು ಪ್ರದೇಶವು ಕಿತ್ತಳೆ ತೋಟಗಳಿಗಾಗಿ ಹೇಳಿ ಮಾಡಿಸಿದಂತಿದ್ದು, ಇದಕ್ಕಾಗಿಯೇ ಜಾಂಪುಯಿ ಬೆಟ್ಟಗಳು ಸುಪ್ರಸಿದ್ಧವೆನಿಸಿಕೊಂಡಿವೆ. ನವೆಂಬರ್ ತಿಂಗಳಿನ ಅವಧಿಯಲ್ಲಿ ಜಾಂಪುಯಿ ಬೆಟ್ಟಗಳಲ್ಲಿ ತ್ರಿಪುರಾ ರಾಜ್ಯದ ಅತ್ಯಂತ ದೊಡ್ಡ ಹಬ್ಬವೆಂದೆನಿಸಿಕೊಂಡಿರುವ ಕಿತ್ತಳೆ ಮತ್ತು ಪ್ರವಾಸೋದ್ಯಮ ಹಬ್ಬವನ್ನು ಆಯೋಜಿಸಲಾಗುತ್ತದೆ. ತ್ರಿಪುರಾ ರಾಜ್ಯವು ಜಾಂಪುಯಿ ಬೆಟ್ಟಗಳಲ್ಲಿಯೇ ಕೆಲಬಗೆಯ ಅತ್ಯುತ್ತಮ ದರ್ಜೆಯ ಕಿತ್ತಳೆ ಹಣ್ಣುಗಳನ್ನು ಉತ್ಪಾದಿಸುತ್ತದೆ. ಈ ಹಬ್ಬದ ಅವಧಿಯಲ್ಲಿ ಕಿತ್ತಳೆ ಹಣ್ಣುಗಳನ್ನು ವನ್ಯಜೀವಿಗಳ ಆಕೃತಿಯಲ್ಲಿಯೋ ಅಥವಾ ಭಾರತ ದೇಶದ ಸುಪ್ರಸಿದ್ಧವಾದ ಕೋಟೆಕೊತ್ತಲಗಳ ರೂಪದಲ್ಲಿಯೋ ಅಣಿಗೊಳಿಸಲಾಗುತ್ತದೆ ಹಾಗೂ ಪ್ರದರ್ಶನಕ್ಕಿರಿಸಲಾಗುತ್ತದೆ. ಟಿಬೇಟಿಯನ್ ಕರಕುಶಲ ವಸ್ತುಗಳು, ಕಿತ್ತಳೆ ಹಣ್ಣುಗಳು, ಚಹಾ ಎಲೆಗಳು, ಮತ್ತು ಕಾಫಿ ಬೀಜಗಳನ್ನು ಮಾರಾಟ ಮಾಡುವ ವಿವಿಧ ಮಳಿಗೆಗಳನ್ನೊಳಗೊಂಡ ಭವ್ಯವಾದ ಸಂತೆಯೊಂದನ್ನೂ ಈ ಹಬ್ಬದ ಅವಧಿಯಲ್ಲಿ ಆಯೋಜಿಸಲಾಗುತ್ತದೆ. ಜಾಂಪುಯಿಯಲ್ಲಿರುವ ಹತ್ತು ಗ್ರಾಮಗಳ ಪೈಕಿ ಸಾಬುಯಿಲ್ ಗ್ರಾಮವೂ ಸಹ ಒಂದಾಗಿದೆ. ತ್ರಿಪುರಾ ರಾಜ್ಯ ಸರ್ಕಾರವು ರಾಜ್ಯದಲ್ಲಿ ಪ್ರವಾಸೋದ್ಯಮವನ್ನು ನಿರಂತರವಾಗಿ ಅಭಿವೃದ್ಧಿಪಡಿಸುವ ದಿಕ್ಕಿನಲ್ಲಿ ನಿರತವಾಗಿರುವುದರಿಂದ, ಸಾಬುಯಿಲ್ ಗ್ರಾಮದ ದೋಣಿ ವಿಹಾರವು ಈ ನಿಟ್ಟಿನಲ್ಲಿ ಒಂದು ಹೊಸ ಸೇರ್ಪಡೆಯಾಗಿದೆ. ಈ ಗ್ರಾಮದಲ್ಲಿರುವ ಬಹುತೇಕ ಮಂದಿ ಮಿಜೋ ಜನಾಂಗಕ್ಕೆ ಸೇರಿದವರಾಗಿದ್ದು, ಇವರ ಮಾತೃ ಭಾಷೆಯು ಲುಷಾಯಿ ಭಾಷೆಯಾಗಿರುತ್ತದೆ. ತ್ರಿಪುರದಲ್ಲಿ ಅನೇಕ ಪ್ರೇಕ್ಷಣೀಯ ಸ್ಥಳಗಳಿದ್ದು, ಅವುಗಳಲ್ಲಿ ಉದಯಪುರದಲ್ಲಿರುವ 'ತ್ರಿಪುರ ಸುಂದರಿ ದೇವಾಲಯ' ಭಾರತೀಯ 51 ಶಕ್ತಿ ಪೀಠಗಳಲ್ಲೊಂದು. ಪುರಾಣಗಳ ಪ್ರಕಾರ, ದಕ್ಷನ ಯಜ್ಞಕುಂಡದಲ್ಲಿ ದಹಿಸಿಹೋದ ಸತಿಯ ಕಳೇಬರವನ್ನು ಎತ್ತಿಕೊಂಡು ಮಹಾದೇವನು ತಾಂಡವ ನೃತ್ಯವನ್ನು ಆರಂಭಿಸಿದ್ದ ಝಳದಲ್ಲಿ ಮೂರು ಲೋಕಗಳೂ ಸುಟ್ಟುಹೋಗುವ ಸ್ಥಿತಿಯಲ್ಲಿದ್ದವು. ಶಿವನ ಆಕ್ರೋಶಕ್ಕೆ ತಡೆ ಹಾಕಲು ಮಹಾ ವಿಷ್ಣು ತನ್ನ ಸುದರ್ಶನ ಚಕ್ರದಿಂದ ಸತಿಯ ಕಳೇಬರವನ್ನು 51 ತುಂಡುಗಳಾಗಿ ಕತ್ತರಿಸಿದ. ಈ ತುಂಡುಗಳು ಕೆಳಗೆ ಬಿದ್ದ ಸ್ಥಳಗಳೇ ಶಕ್ತಿಪೀಠಗಳೆಂದು ಹೆಸರಾದವು. ಹಾಗೆ ಬಿದ್ದ ಸತೀದೇವಿಯ ಬಲಗಾಲು, ಮಾತಾಬಾರಿ ಎಂದು ಹೆಸರು ಪಡೆಯಿತು. ದಕ್ಷಿಣ ತ್ರಿಪುರಾ ಜಿಲ್ಲೆಯ ಉದಯಪುರದಲ್ಲಿರುವ ಈ ಕ್ಷೇತ್ರದಲ್ಲಿ ಮಾತಾ ತ್ರಿಪುರಸುಂದರಿ ದೇವಾಲಯ ನಿರ್ಮಾಣವಾಗಿದೆ. ಪ್ರತಿವರ್ಷವೂ ದೀಪಾವಳಿ ಹಬ್ಬದ ದಿನ ನಡೆಯುವ ಜಾತ್ರೆಯಲ್ಲಿ ಲಕ್ಷಾಂತರ ಯಾತ್ರಾರ್ಥಿಗಳು ಬಂದು ಸೇರುತ್ತಾರೆ. 1510 ರಲ್ಲಿ ಮಹಾರಾಜ ಧನ್ಯಮಾಣಿಕ್ಯ ಈ ದೇವಾಲಯವನ್ನು ಕಟ್ಟಿಸಿದನು ಎನ್ನಲಾಗುತ್ತದೆ. ಬಂಗಾಲಿ ಶೈಲಿಯಲ್ಲಿರುವ ಈ ದೇವಸ್ಥಾನ ಚೌಕಾಕೃತಿಯ ಗರ್ಭಗುಡಿಯನ್ನು ಹೊಂದಿದೆ. ತ್ರಿಪುರ ಸುಂದರಿಯ 2 ವಿಗ್ರಹಗಳಿವೆ. ಒಂದು ವಿಗ್ರಹಕ್ಕೆ 'ಛೋಟಿಮಾ' ಎಂದೂ ಮತ್ತೊಂದಕ್ಕೆ "ತ್ರಿಪುರ ಸುಂದರೀದೇವಿ" ಎಂದೂ ಹೆಸರಿದೆ. ತ್ರಿಪುರಾ ರಾಜರು, ಹಿಂದೆ ವಿಹಾರ, ಮತ್ತು ಯುದ್ಧಗಳ ವೇಳೆಯಲ್ಲಿ 'ಛೋಟಿಮಾ' ಮೂರ್ತಿಯನ್ನು ತಮ್ಮೊಂದಿಗೆ ಒಯ್ಯುತ್ತಿದ್ದರಂತೆ. ದೇವಾಲಯದ ವಾಸ್ತು ರಚನೆ ಆಮೆಯಾಕಾರವಾಗಿರುವುದರಿಂದ ಕೂರ್ಮಪೀಠ'ವೆಂದೂ ಕರೆಯುತ್ತಾರೆ.

ಕಲ್ಪವೃಕ್ಷ

@ಪ್ರೀತಂ ರೈ ಇ

ಕ್ಯಾಪ್ಟನ್ ಕುಲದೀಪ್ ಸಿಂಗ್ ರಾಥಿ

1971 ರ ಸಮಯದಲ್ಲಿ, ಕ್ಯಾಪ್ಟನ್ KS ರಾಥಿ ಅವರ ಘಟಕ 8 ಜಾಟ್ ಅನ್ನು J&K ಯ ಪೂಂಚ್ ಸೆಕ್ಟರ್‌ನಲ್ಲಿ ನಿಯೋಜಿಸಲಾಯಿತು. ಪೂರ್ವದ ಮುಂಭಾಗದಲ್ಲಿ ಕಾರ್ಯಾಚರಣೆಗಳು ವೇಗವನ್ನು ಪಡೆಯುತ್ತಿದ್ದಂತೆ, ಭಾರತೀಯ ಸೇನೆಯ ಮೇಲೆ ಒತ್ತಡವನ್ನು ಹೆಚ್ಚಿಸಲು ಪಾಕಿಸ್ತಾನವು ಪಶ್ಚಿಮ ಮುಂಭಾಗದಲ್ಲಿಯೂ ಆಕ್ರಮಣಕಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದ ಸಮಯ. ಈ ಕಾರ್ಯತಂತ್ರದ ಭಾಗವಾಗಿ, ಪಾಕಿಸ್ತಾನಿ ಸೇನೆಯು ಪೂಂಚ್ ಸೆಕ್ಟರ್‌ನಲ್ಲಿ ಭಾರತೀಯ ನೆಲೆಯ ಮೇಲೆ 01 ಡಿಸೆಂಬರ್ 1971 ರಂದು ದಾಳಿ ಮಾಡಿತು. ಕ್ಯಾಪ್ಟನ್ ರಾಥಿ ಆ ಸಮಯದಲ್ಲಿ ಅವರ ಬೆಟಾಲಿಯನ್‌ನ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು ಮತ್ತು ಪರಿಸ್ಥಿತಿಯ ಗಂಭೀರತೆಯನ್ನು ಅರ್ಥಮಾಡಿಕೊಂಡರು. ಅವರು ಪರಿಸ್ಥಿತಿಯನ್ನು ತ್ವರಿತವಾಗಿ ವಿಶ್ಲೇಷಿಸಿದರು ಮತ್ತು ಮುಂದುವರಿಯುತ್ತಿರುವ ಶತ್ರುವನ್ನು ಹೇಗಾದರೂ ನಿಲ್ಲಿಸಬೇಕು ಎಂದು ತೀರ್ಮಾನಿಸಿದರು. ಕ್ಯಾಪ್ಟನ್ ರಾಥಿ ಕೈ ಬೆರಳೆಣಿಕೆಯಷ್ಟು ತನ್ನ ಜನರೊಂದಿಗೆ ಒಂದು ಬದಿಯಿಂದ ಶತ್ರು ಪಡೆಗಳ ಮೇಲೆ ದಾಳಿ ಮಾಡಲು ನಿರ್ಧರಿಸಿದರು. ಶತ್ರುಗಳ ದಾಳಿಯನ್ನು ವಿಫಲಗೊಳಿಸುವಲ್ಲಿ ಯಶಸ್ವಿಯಾಗುತ್ತಾರೆ. ಕ್ಯಾಪ್ಟನ್ ರಾಥಿಯ ಆಕ್ರಮಣದಿಂದ ಆಶ್ಚರ್ಯಗೊಂಡ ಶತ್ರುಗಳು ಮರು ಸಂಘಟಿತರಾಗಿ ಮತ್ತೆ ದಾಳಿ ಮಾಡಲು ನಿರ್ಧರಿಸಿದರು. ಶತ್ರುಗಳು ಹೊಸ ದಾಳಿಗಾಗಿ ಮರುಸಂಘಟಿಸಿದರು ಮತ್ತು ಭಾರತೀಯ ಸ್ಥಾನದ ಮೇಲೆ ಭಾರೀ ಫಿ



ರಂಗಿ ಗುಂಡಿನ ದಾಳಿಯನ್ನು ಶುರು ಮಾಡಿದರು. ಶತ್ರುಗಳ ದಾಳಿಯ ಉಗ್ರತೆಯಿಂದ ಹಿಂಜರಿಯದೆ, ಕ್ಯಾಪ್ಟನ್ ರಾಥಿ ಕಂದಕದಿಂದ ಕಂದಕಕ್ಕೆ ತೆರಳಿ ದಾಳಿಯನ್ನು ಹಿಮ್ಮೆಟ್ಟಿಸಲು ತನ್ನ ಸೈನಿಕರನ್ನು ಪ್ರೇರೇಪಿಸಿದರು. ಆದಾಗ್ಯೂ, ಈ ಪ್ರಕ್ರಿಯೆಯಲ್ಲಿ, ಶತ್ರು ಫಿರಂಗಿ ಶೆಲ್ಲಿಂದ ಹೊಡೆದು ಗಂಭೀರವಾಗಿ ಗಾಯಗೊಂಡರು. ನಂತರ ಅವರು 07 ಡಿಸೆಂಬರ್ 1971 ರಂದು ಹುತಾತ್ಮರಾದರು. ಕ್ಯಾಪ್ಟನ್ ರಾಥಿ ಒಬ್ಬ ಧೀರ ಸೈನಿಕ ಮತ್ತು ಸಮಗ್ರ ಅಧಿಕಾರಿಯಾಗಿದ್ದು, ಅವರು ತನ್ನ ತಂಡವನ್ನು ಮುನ್ನಡೆಸುತ್ತಾ ಹೋರಾಡಿ, ಭಾರತೀಯ ಸೇನೆಯ ಅತ್ಯುನ್ನತ ಸಂಪ್ರದಾಯಗಳನ್ನು ಅನುಸರಿಸಿ 23 ವರ್ಷ ವಯಸ್ಸಿನಲ್ಲಿ ತಮ್ಮ ಪ್ರಾಣವನ್ನು ತ್ಯಜಿಸಿದರು. ಕ್ಯಾಪ್ಟನ್ ಕುಲದೀಪ್ ಸಿಂಗ್ ರಾಥಿ ಅವರಿಗೆ ಅವರ ಅತ್ಯುತ್ತಮ ಧೈರ್ಯ, ಮಣಿಯದ ಹೋರಾಟದ ಮನೋಭಾವ ಮತ್ತು ಪರಮೋಚ್ಚ ತ್ಯಾಗಕ್ಕಾಗಿ "ವೀರ ಚಕ್ರ" ಶೌರ್ಯ ಪ್ರಶಸ್ತಿಯನ್ನು ನೀಡಲಾಯಿತು. ಕ್ಯಾಪ್ಟನ್ ಕುಲದೀಪ್ ಸಿಂಗ್ ರಾಥಿ ಅವರು ಹರಿಯಾಣದ ಬಹದ್ದೂರ್‌ಗಢ್ ಜಿಲ್ಲೆಯ ಸಂಖೋಲ್ ಗ್ರಾಮದಲ್ಲಿ 01 ಆಗಸ್ಟ್ 1947 ರಂದು ಜನಿಸಿದರು. ಅವರ ತಂದೆ ಸೇನಾ ಅನುಭವಿ ಕ್ಯಾಪ್ಟನ್ ಹಾರೀಫ್ ಸಿಂಗ್ ರಾಥಿ. ಕ್ಯಾಪ್ಟನ್ ಕೆಎಸ್ ರಾಥಿ ನಾಲ್ಕು ಒಡಹುಟ್ಟಿದವರಲ್ಲಿ ಹಿರಿಯರಾಗಿದ್ದರು. ಅವರ ತಂದೆಯಿಂದ ಸ್ಫೂರ್ತಿ ಪಡೆದ ಅವರು ಯಾವಾಗಲೂ ಸೈನ್ಯದ ಸಮವಸ್ತ್ರವನ್ನು ಧರಿಸಲು ಬಯಸಿದ್ದರು. 21 ಡಿಸೆಂಬರ್ 1968 ರಂದು ಅವರು 21 ನೇ ವಯಸ್ಸಿನಲ್ಲಿ ನೇಮಕಗೊಂಡರು ಕನಸು ಅಂತಿಮವಾಗಿ ನನಸಾಯಿತು. ಅವರನ್ನು ಜಾಟ್ ರೆಜಿಮೆಂಟ್‌ನ 8 ಜಾಟ್ ಬೆಟಾಲಿಯನ್‌ಗೆ ಎರಡನೇ ಲೆಫ್ಟಿನೆಂಟ್ ಆಗಿ ನಿಯೋಜಿಸಲಾಯಿತು. 1971 ರಲ್ಲಿ ಕ್ಯಾಪ್ಟನ್ ಕೆಎಸ್ ರಾಥಿ ಅವರ ಘಟಕವು ಪಶ್ಚಿಮ ವಲಯದಲ್ಲಿ ನಿಯೋಜಿಸಲ್ಪಟ್ಟಿತು. ಕರಾವಳಿ ತರಂಗಿಣಿ ಇಂತಹ ಮಹಾನ್ ಯೋಧನಿಗೆ ಕರ ಮುಗಿದು ನಮಿಸುತ್ತಿದೆ.

ಪಾರಿಜಾತ

ಕರಾವಳಿ ತರಂಗಿಣಿ

ಒಂದು ಮನೆಯಲ್ಲಿ ಹುಟ್ಟಿ ಇನ್ನೊಂದು ಮನೆ ಬೆಳಗುವವಳು ಈ ಹೆಣ್ಣು. ಹೆಣ್ಣಿಲ್ಲದ ಮನೆ ಅದು ಮನೆಯಾಗಲು ಸಾಧ್ಯವಿಲ್ಲ. ಯಾಕೆಂದರೆ ಗಂಡಿನ ಪ್ರತಿ ಹಂತದಲ್ಲಿಯೂ ಹೆಣ್ಣಿನ ಅವಶ್ಯಕತೆ ಇದ್ದೇ ಇರುತ್ತದೆ. ಹೆಣ್ಣು ಅಮ್ಮನಾಗಿ, ಅಕ್ಕನಾಗಿ, ತಂಗಿಯಾಗಿ, ಹೆಂಡತಿಯಾಗಿ, ಮಗಳಾಗಿ ಹೀಗೇ ಒಂದಲ್ಲ ಒಂದು ರೀತಿಯಲ್ಲಿ ಗಂಡನ್ನು ಆವರಿಸಿಕೊಂಡಿರುತ್ತಾಳೆ. ಆದರೆ ಈ ಹೆಣ್ಣಿನ ಜೀವನದ ಹಾದಿ ಅಷ್ಟು ಸುಲಭವಾಗಿರಲಿಲ್ಲ. ಇಂದೂ ಕೂಡ ಅದು ಸುಲಭವಾಗಿಲ್ಲ ಎನ್ನುವುದು ವಿಪರ್ಯಾಸವೇ ಸರಿ. ಆದರೂ ಹೆಣ್ಣು ತನ್ನ ಜೀವನದಲ್ಲಿ ಅಪೂರ್ವವಾದದ್ದನ್ನು ಸಾಧಿಸಿ ಉಳಿದವರಿಗೆ ಮಾದರಿಯಾಗಿದ್ದಾಳೆ. ಅಂತಹ ಹೆಣ್ಣು ಮಕ್ಕಳಲ್ಲಿ ಹೆಣ್ಣು ಅದುಗೆ ಮನೆಯಲ್ಲಿಯೇ ಕೊಳೆಯಬೇಕಾದ ಸಂದರ್ಭದಲ್ಲೂ ಪರ ದೇಶದಲ್ಲಿ ಕಲಿತು ಕೃಷಿ ವಿಜ್ಞಾನಿಯಾದ "ಜಾನಕಿ ಅಮ್ಮಾಳ್" ಇಂದಿನ "ಕರಾವಳಿ ತರಂಗಿಣಿ"ಯ ಅತಿಥಿ. ಕೇರಳದ ತೆಲ್ಲಿಚೇರಿಯ ಒಂದು ಸುಸಂಸ್ಕೃತ ಕುಟುಂಬದಲ್ಲಿ 1897 ನವೆಂಬರ್ 4 ರಂದು ಜನಿಸಿದ ಜಾನಕಿ ಅಮ್ಮಾಳ್ ಅವರ ತಂದೆ ಕಕ್ಕಟ್ ಕೃಷ್ಣನ್ ಮದ್ರಾಸ್ ತ್ರಿಂತ ನ್ಯಾಯಾಲಯದಲ್ಲಿ ಉಪನ್ಯಾಯಾಧೀಶರಾಗಿದ್ದರು. ಅಮ್ಮಾಳ್ ಅವರಿಗೆ ಆರು ಜನ ಸಹೋದರರು ಹಾಗು ಐದು ಜನ ಸಹೋದರಿಯರಿದ್ದರು. ಇವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ತೆಲ್ಲಿಚೇರಿಯಲ್ಲಿ ಮುಗಿಸಿದ ನಂತರ ಉನ್ನತ ಶಿಕ್ಷಣಕ್ಕಾಗಿ ಮದ್ರಾಸ್ ತೆರಳಿದರು. ತಮ್ಮ ಶಿಕ್ಷಣದ ನಂತರ ಅವರು ಮದ್ರಾಸ್‌ನ ವಿಮೆನ್ಸ್ ಕ್ರಿಶ್ಚಿಯನ್ ಕಾಲೇಜ್‌ನಲ್ಲಿ ಪ್ರಾಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದೂ ಅಲ್ಲದೆ, ಅಮೇರಿಕಾದ ಮಿಷಿಗನ್ ವಿಶ್ವವಿದ್ಯಾಲಯದಿಂದ ಶಿಷ್ಯವೇತನವನ್ನು ಪಡೆದು ಅಮೇರಿಕಾದಲ್ಲಿ ಸ್ನಾತಕೋತ್ತರ ಪದವಿಯನ್ನು ಪಡೆದರು. ಕ್ರೋಮೋಸೋಮ್ ಸಂಖ್ಯೆಗಳು ಮತ್ತು ಪ್ಲಾ



ಯ್ಡಿ ಕುರಿತಾದ ಇವರ ಅಧ್ಯಯನಗಳು ಅನೇಕ ಸಂದರ್ಭಗಳಲ್ಲಿ ಜಾತಿ ಮತ್ತು ಪ್ರಭೇದಗಳ ವಿಕಾಸದ ಮೇಲೆ ಬೆಳಕು ಚೆಲ್ಲಿದವು. 1945 ರಲ್ಲಿ ಸಿ. ಡಿ. ಡಾರ್ಲಿಂಗ್ಟನ್ ಅವರೊಂದಿಗೆ ಜಂಟಿಯಾಗಿ ಬರೆದ ಕ್ರೋಮೋಸೋಮ್ ಅಟ್ಲಾಸ್ ಆಫ್ ಕಲ್ಟಿವೇಟೆಡ್ ಪ್ಲಾಂಟ್ಸ್ ಒಂದು ಸಂಕಲನವಾಗಿದ್ದು, ಇದು ಅನೇಕ ಜಾತಿಗಳ ಬಗ್ಗೆ ತನ್ನದೇ ಆದ ಹೆಚ್ಚಿನ ಕೃತಿಗಳನ್ನು ಸಂಯೋಜಿಸಿತು. ಔಷಧೀಯ ಮತ್ತು ಇತರ ಸಸ್ಯಗಳಲ್ಲದೆ ಸೋಲಾನಮ್, ದತುರಾ, ಮೆಂಥಾ, ಸಿಂಬೋಪೋಗನ್ ಮತ್ತು ಡಯೋಸ್ಕೋರಿಯಾ ತಳಿಗಳಲ್ಲೂ ಅಮ್ಮಾಳ್ ಕೆಲಸ ಮಾಡಿದರು. ಇವರ ಅತ್ಯಂತ ಗಮನಾರ್ಹವಾದ ಕೆಲಸವು ಕಬ್ಬು ಮತ್ತು ಬಿಳಿಬದನೆ ಮೇಲಿನ ಅಧ್ಯಯನಗಳನ್ನು ಒಳಗೊಂಡಿತ್ತು, ಭಾರತದ ಕೇರಳದ ಮಳೆಕಾಡುಗಳಿಂದ ಔಷಧೀಯ ಮತ್ತು ಆರ್ಥಿಕ ಮೌಲ್ಯದ ಸಸ್ಯಗಳಲ್ಲಿ ಆಸಕ್ತಿಯನ್ನು ಪಡೆದರು. ಇವರು ವಿಶ್ವದ ಶ್ರೇಷ್ಠ ಗಣಿತಜ್ಞರೆಂದು ಪ್ರಖ್ಯಾತರಾದ ಶ್ರೀನಿವಾಸ ರಾಮಾನುಜನ್ ರವರ ಧರ್ಮಪತ್ನಿ. ನಿವೃತ್ತಿಯ ನಂತರವೂ ಅಮ್ಮಾಳ್ ಔಷಧೀಯ ಸಸ್ಯಗಳು ಮತ್ತು ಎಥ್ನೋಬೊಟನಿ ಬಗ್ಗೆ ವಿಶೇಷ ಗಮನವನ್ನು ಕೇಂದ್ರೀಕರಿಸುವ ಕೆಲಸವನ್ನು ಮುಂದುವರೆಸಿದರು. ಅವರು ವಾಸಿಸುತ್ತಿದ್ದ ಮತ್ತು ಕೆಲಸ ಮಾಡುತ್ತಿದ್ದ ಸೆಂಟರ್ ಆಫ್ ಅಡ್ವಾನ್ಸ್ಡ್ ಸ್ಟಡಿ ಫೀಲ್ಡ್ ಲ್ಯಾಬೋರೇಟರಿಯಲ್ಲಿ ಔಷಧೀಯ ಸಸ್ಯಗಳ ಉದ್ಯಾನವನ್ನು ಅಭಿವೃದ್ಧಿಪಡಿಸಿದರು. ಅಮ್ಮಾಳ್ ಅವರಿಗೆ 1935 ರಲ್ಲಿ ಭಾರತೀಯ ವಿಜ್ಞಾನ ಅಕಾಡಮಿಯ ವತಿಯಿಂದ ಪ್ರಶಸ್ತಿ ಲಭಿಸಿದೆ. 1957ರಲ್ಲಿ ಭಾರತೀಯ ರಾಷ್ಟ್ರೀಯ ವಿಜ್ಞಾನ ಅಕಾಡಮಿ ಇವರಿಗೆ ಫೆಲೋಶಿಪ್ ನೀಡಿ ಗೌರವಿಸಿತು. 1956 ರಲ್ಲಿ ಅಮೇರಿಕಾದ ಮಿಷಿಗನ್ ವಿಶ್ವವಿದ್ಯಾಲಯ ಇವರಿಗೆ ಎಲ್.ಎಲ್.ಡಿ ಪದವಿ ನೀಡಿ ಗೌರವಿಸಿತು. ಭಾರತ ಸರ್ಕಾರವು ಅಮ್ಮಾಳ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಿ ಗೌರವಿಸಿದೆ. 1984 ಫೆಬ್ರವರಿ 7ರಂದು ವಿಧಿವಶರಾದರು. ಇಂತಹ ಮಹಾನ್ ಸಾಧಕಿಗೆ ಕರಾವಳಿ ತರಂಗಿಣಿ ನಮಿಸುತ್ತಿದೆ.

ಮಂಗಳೂರಿನಲ್ಲಿ ಇಂಧನ ಭದ್ರತೆಯ ಹೊಸ ಕವಚ

ಒಂದನೇ ಪುಟದಿಂದ......

ತಲೆಎತ್ತಿದೆ. ಆಧುನಿಕ ಎಂಜಿನಿಯರಿಂಗ್ ಕೌಶಲ್ಯಕ್ಕೆ ಹಿಡಿದ ಕೈಗನ್ನಡಿಯಂತಿರುವ ಈ ಬೃಹತ್ ಯೋಜನೆಯನ್ನು ಹಿಂದೂಸ್ತಾನ್ ಪೆಟ್ರೋಲಿಯಂಕಾರ್ಪೊರೇಷನ್ ಲಿಮಿಟೆಡ್ (HPCL) ನೇತೃತ್ವದಲ್ಲಿ ಹಾಗೂ ಎಂಜಿನಿಯರ್ಸ್ ಇಂಡಿಯಾ ಲಿಮಿಟೆಡ್ (EIL) ತಾಂತ್ರಿಕ ಸಹಯೋಗದಲ್ಲಿ ಅತ್ಯಂತ ಯಶಸ್ವಿಯಾಗಿ ನಿರ್ಮಿಸಲಾಗಿದೆ. ಸುಮಾರು 850 ಕೋಟಿಗೂ ಅಧಿಕ ವೆಚ್ಚದಲ್ಲಿ ತಲೆಎತ್ತಿರುವ ಈ ಭೂಗತ ಬಂಡೆಕಲ್ಲು ಗುಹೆಯ (Underground Rock Cavern) ಸಂಗ್ರಹಣಾಗಾರವು ಒಟ್ಟು 80,000 ಮೆಟ್ರಿಕ್ ಟನ್ ಅಂದರೆ ಬರೋಬ್ಬರಿ 6 ಕೋಟಿ ಲೀಟರ್ ದ್ರವೀಕೃತ ಪೆಟ್ರೋಲಿಯಂ ಅನಿಲವನ್ನು ಏಕಕಾಲದಲ್ಲಿ ಶೇಖರಿಸಿಡುವ ಅಗಾಧ ಸಾಮರ್ಥ್ಯವನ್ನು ಹೊಂದಿದೆ. ಭೂಮಿಯ ಆಳದಲ್ಲಿರುವ ಅತ್ಯಂತಗಟ್ಟಿ ಮುಟ್ಟಾದ ಗ್ರಾನೈಟ್ ಬಂಡೆಗಳನ್ನು ಅತ್ಯಾಧುನಿಕ ತಂತ್ರಜ್ಞಾನದ ಮೂಲಕ ಕೊರೆದು ಈ ಸುರಕ್ಷಿತ ಘಟಕವನ್ನು ನಿರ್ಮಿಸಲಾಗಿದ್ದು, ಇದಕ್ಕಾಗಿ 1,083 ಮೀಟರ್‌ಉದ್ದದ ಮುಖ್ಯ ಪ್ರವೇಶ ಸುರಂಗ ಹಾಗೂ 486 ಮೀಟರ್‌ಉದ್ದದ ಸಂಪರ್ಕ ಸುರಂಗಗಳನ್ನು ಕೊರೆಯಲಾಗಿದೆ. ಸಾಮಾನ್ಯವಾಗಿ ಭೂಮಿಯ ಮೇಲ್ಭಾಗದಲ್ಲಿ ಬೃಹತ್‌ಗಾತ್ರದ ಟ್ಯಾಂಕ್‌ಗಳನ್ನು ನಿರ್ಮಿಸಿ ಅನಿಲ ಸಂಗ್ರಹಿಸುವುದು ಹೆಚ್ಚು ಜಾಗವನ್ನು ಆಕ್ರಮಿಸುವುದರ ಜೊತೆಗೆ ಸುರಕ್ಷತೆಯ ದೃಷ್ಟಿಯಿಂದಲೂ ಸವಾಲಿನ ಕೆಲಸವಾಗಿರುತ್ತದೆ. ಆದರೆ, ಭೂಮಿಯ ಆಳದಲ್ಲಿ ನಿರ್ಮಾಣವಾಗಿರುವ ಈ ಗುಹಾ ಸಂಗ್ರಹಣಾಗಾರವು ಭೂಮಿಯ ಮೇಲ್ಮೈ ಪರಿಸರಕ್ಕೆ ಯಾವುದೇ ಧಕ್ಕೆಯಾಗದಂತೆ ಅತ್ಯಂತ ಸುರಕ್ಷಿತವಾಗಿ ಕಾರ್ಯನಿರ್ವಹಿಸಲಿದೆ. ಅನಿಲ ಸೋರಿಕೆಯಾಗದಂತೆ ತಡೆಯಲು ಇಲ್ಲಿ ಅಂತಾರಾಷ್ಟ್ರೀಯ ಮಟ್ಟದ ಅತ್ಯಾಧುನಿಕ 'ವಾಟರ್‌ಕರ್ಟನ್' (ನೀರಿನ ಪರದೆ) ತಂತ್ರಜ್ಞಾನವನ್ನು ಅಳವಡಿಸಲಾಗಿದೆ. ಬಂಡೆಕಲ್ಲುಗಳ ಸುತ್ತಲೂ ನಿರಂತರವಾಗಿ ನೀರಿನ ಒತ್ತಡವನ್ನು ಕಾಯ್ದುಕೊಳ್ಳುವ ಮೂಲಕ ಅನಿಲವು ಹೊರಬರದಂತೆ ತಡೆಯುವ ಈ ವೈಜ್ಞಾನಿಕ ವಿಧಾನವು ವಿಶ್ವದ ಅತ್ಯುತ್ತಮ ಸುರಕ್ಷತಾ ಮಾನದಂಡಗಳಲ್ಲಿ ಒಂದಾಗಿದೆ. ನವಮಂಗಳೂರು ಬಂದರಿನ ಮೂಲಕ ವಿದೇಶಗಳಿಂದ ಆಮದಾಗುವ ಅಡುಗೆ ಅನಿಲವನ್ನು ನೇರವಾಗಿ ಪೈಪ್‌ಲೈನ್ ಮೂಲಕ ಈ ಭೂಗತ ಘಟಕಕ್ಕೆ ತಂದು ಶೇಖರಿಸಿಡಲಾಗುತ್ತದೆ. ಬಳಿಕ ಇಲ್ಲಿಂದ ಅಗತ್ಯಕ್ಕೆ ತಕ್ಕಂತೆ ಪೈಪ್‌ಲೈನ್ ಹಾಗೂ ಟ್ಯಾಂಕರ್‌ಗಳ ಮೂಲಕ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ವಿವಿಧ ಬಾಟ್ಲಿಂಗ್ ಘಟಕಗಳಿಗೆ ರವಾನಿಸಲಾಗುತ್ತದೆ. ವಿಶೇಷವಾಗಿ ಮಳೆಗಾಲದಲ್ಲಿ ಅರಬ್ಬಿ ಸಮುದ್ರ ಪ್ರಕ್ಷುಬ್ಧಗೊಂಡಾಗ ಹಡಗುಗಳ ಸಂಚಾರಕ್ಕೆ ಅಡ್ಡಿಯಾದರೆ ಅಥವಾ ಅಂತಾರಾಷ್ಟ್ರೀಯ ಮಟ್ಟದಲ್ಲಿತೈಲ ಮತ್ತು ಅನಿಲ ಪೂರೈಕೆಯಲ್ಲಿ ವ್ಯತ್ಯಯಉಂಟಾದರೆ, ಈ ಭೂಗತಘಟಕದಲ್ಲಿ ಸಂಗ್ರಹವಿರುವ ಅನಿಲವು ಆಪತ್ಬಾಂಧವನಂತೆ ಕೆಲಸ ಮಾಡಲಿದೆ. ಇದರಿಂದಾಗಿ ಗ್ರಾಹಕರಿಗೆ ಅಡುಗೆ ಅನಿಲದ ಕೊರತೆ ಉಂಟಾಗದಂತೆ ಮತ್ತು ಬೆಲೆ ಏರಿಕೆಯ ಒತ್ತಡವನ್ನು ನಿಯಂತ್ರಿಸಲು ಸರ್ಕಾರಕ್ಕೆ ಹೆಚ್ಚಿನ ಬಲ ಸಿಗಲಿದೆ. ಈಗಾಗಲೇ ಮಂಗಳೂರು ರಿಫೈನರಿ ಮತ್ತು ಪೆಟ್ರೋಕೆಮಿಕಲ್ಸ್ ಲಿಮಿಟೆಡ್ ಹಾಗೂ ದೇಶದ ಆಯಕಟ್ಟಿನ ಭೂಗತ ಕಚ್ಚಾ ತೈಲ ಸಂಗ್ರಹಣಾಗಾರವನ್ನು ಹೊಂದಿರುವ ಜಿಲ್ಲೆ ದಕ್ಷಿಣಕನ್ನಡ ಜಿಲ್ಲೆ.

ರಾಜಕೀಯದಲ್ಲಿ ಈಜುವುದು ಸುಲಭವಲ್ಲ- ಡಿಕೆಶಿ

ಒಂದನೇ ಪುಟದಿಂದ......

ನಾನಲ್ಲ. ಇದು ನನ್ನ ಬದ್ಧತೆ ಎಂದು ಸ್ಪಷ್ಟಪಡಿಸಿದರು. ಬಂಗಾರಪ್ಪ, ಎಸ್.ಎಂ. ಕೃಷ್ಣ ಹಾಗೂ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ರಾಜಕೀಯ ಸನ್ನಿವೇಶಗಳನ್ನು ನೆನಪಿಸಿಕೊಂಡ ಅವರು, ಕುಮಾರಸ್ವಾಮಿ ಅವರೊಂದಿಗೆ ಭಿನ್ನಾಭಿಪ್ರಾಯಗಳಿದ್ದರೂ, ಸರ್ಕಾರದಲ್ಲಿದ್ದಷ್ಟು ದಿನ ಅವರಿಗೆ ಮೋಸ ಮಾಡಬೇಕು ಎಂದು ಬಯಸಿರಲಿಲ್ಲ. ಆತ್ಮಸಾಕ್ಷಿಗಿಂತ ದೊಡ್ಡದು ಯಾವುದೂ ಇಲ್ಲ ಎಂದರು. ಸುಮಾರು 48ನೇ ವಯಸ್ಸಿನಲ್ಲಿ ಮುಕ್ತ ವಿಶ್ವವಿದ್ಯಾಲಯದ ಮೂಲಕ ಪದವಿ ಪಡೆದಕ್ಷಣತಮ್ಮ ಬದುಕಿನ ಅತ್ಯಂತ ಸಂತೋಷದ ದಿನ ಎಂದು ಹಂಚಿಕೊಂಡರು. ಆಯುಧಗಳಿಂದಲ್ಲ, ಮನಸ್ಸುಗಳು ಮತ್ತು ಅಕ್ಷರಗಳಿಂದ ಗೆಲ್ಲಲು ಸಾಧ್ಯ ಎಂದು ಗಾಂಧೀಜಿ ಹೇಳಿದ್ದಾರೆ. ಇತಿಹಾಸ ಮರೆತವರುಇತಿಹಾಸ ಸೃಷ್ಟಿಸಲು ಸಾಧ್ಯವಿಲ್ಲ ಎಂದು ಅಂಬೇಡ್ಕರ್ ತಿಳಿಸಿದ್ದಾರೆ. ಮೌಲ್ಯಗಳನ್ನು ಮುಂದಿನ ಪೀಳಿಗೆಗೆ ತಿಳಿಸಲು ಇಂತಹ ಪುಸ್ತಕಗಳು ಅತ್ಯಗತ್ಯ. ನನ್ನ ಬದುಕುತೆರೆದ ಪುಸ್ತಕವಾಗಿದ್ದು, ಜೈಲಿಗೆ ಹೋದಾಗಲೂ ಆತ್ಮವಿಶ್ವಾಸ ಕಳೆದುಕೊಂಡಿರಲಿಲ್ಲ. ಕನಕಪುರದಜನರ ಪ್ರೀತಿ ಮತ್ತು ನನ್ನ 40 ವರ್ಷಗಳ ಪರಿಶ್ರಮವೇ ನನ್ನನ್ನು ಈ ಹಂತಕ್ಕೆತಂದಿದೆಎಂದು ತಿಳಿಸಿದರು.

ಬರದಲ್ಲಿ ರಾಜಕೀಯ ಬೇಡ: ಬೊಮ್ಮಾಯಿ

ಒಂದನೇ ಪುಟದಿಂದ......

ವಿಪತ್ತು ನಿರ್ವಹಣಾ ನಿಧಿಯಲ್ಲಿ ಮುಂಗಡವಾಗಿ ಹಣ ನೀಡಲಾಗಿರುತ್ತದೆ ಮತ್ತು ಜಿಲ್ಲಾಧಿಕಾರಿಗಳ ಬಳಿಯೂ ಸಾಕಷ್ಟು ಅನುದಾನ ಲಭ್ಯವಿರುತ್ತದೆ ಎಂದು ಬೊಮ್ಮಾಯಿ ತಿಳಿಸಿದರು. ಸಂಕಷ್ಟದಲ್ಲಿರುವ ರೈತರಿಗೆ ಪರಿಹಾರ ನೀಡುವಾಗರಾಜ್ಯ ಸರ್ಕಾರವು ತನ್ನ ಬೊಕ್ಕಸದಿಂದ ಮೊದಲು ಹಣ ಬಿಡುಗಡೆ ಮಾಡಬೇಕು, ತದನಂತರ ಕೇಂದ್ರದಿಂದ ಬರುವ ಅನುದಾನವನ್ನು ಸರಿಪಡಿಸಿಕೊಳ್ಳಬೇಕು ಎಂದರು. ತಾವು ಮುಖ್ಯಮಂತ್ರಿಯಾಗಿದ್ದಾಗ ಪ್ರವಾಹ ಸಂಭವಿಸಿದ ತಕ್ಷಣವೇ ಸರ್ಕಾರದ ವತಿಯಿಂದ ಹಣ ಬಿಡುಗಡೆ ಮಾಡಿದ್ದನ್ನು ಸ್ಮರಿಸಿದ ಅವರು, ಒಣ ಬೇಸಾಯಕ್ಕೆ ಕೇಂದ್ರ ನೀಡುತ್ತಿದ್ದ 6,500 ಗೆ ರಾಜ್ಯ ಸರ್ಕಾರದಿಂದ 13,000 ಹಾಗೂ ನೀರಾವರಿಗೆ ಕೇಂದ್ರದ 12,500ರ ಬದಲಾಗಿ ರಾಜ್ಯದಿಂದ 25,000 ಪರಿಹಾರನೀಡಿದ್ದಾಗಿ ತಿಳಿಸಿದರು. ಕೇಂದ್ರದಲ್ಲಿ ಒಂದೇ ಪಕ್ಷದ ಸರ್ಕಾರವಿದ್ದರೂ ತಾವು ನೆರೆ ಪರಿಹಾರಕ್ಕಾಗಿ ಕೇಂದ್ರದ ಅನುದಾನಕ್ಕಷ್ಟೇ ಕಾಯಲಿಲ್ಲ ಎಂದ ಅವರು, ಮುಂಗಾರು ಹಾಗೂ ಹಿಂಗಾರು ಎಲ್ಲವೂ ಮುಗಿದು ತಡವಾಗಿ ಪರಿಹಾರ ನೀಡಿದರೆ ಅದಕ್ಕೆ ಯಾವುದೇ ಸಂವೇದನೆ ಇರುವುದಿಲ್ಲ ಎಂದು ರಾಜ್ಯ ಸರ್ಕಾರದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು. ನಮ್ಮ ಮೆಟ್ರೊ ಅನುದಾನ ಬಿಡುಗಡೆ ಕುರಿತು ನಡೆಯುತ್ತಿರುವ ಚರ್ಚೆಗಳ ಬಗ್ಗೆ ಮಾತನಾಡಿದ ಬೊಮ್ಮಾಯಿ, ಮೆಟ್ರೊಯೋಜನೆಗೆ ಶೇ. 60 ರಿಂದ 65ರಷ್ಟು ಸಾಲ ಪಡೆಯಲಾಗಿದ್ದು, ಅದನ್ನು ಸರ್ಕಾರದ ಬೊಕ್ಕಸದಿಂದ ಮರುಪಾವತಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಮೆಟ್ರೊದಲ್ಲಿ ಪ್ರಯಾಣಿಸುವ ಪ್ರಯಾಣಿಕರ ಟಿಕೆಟ್ ಹಣದಿಂದ ಬರುವ ಆದಾಯದ ಮೂಲಕವೇ ಸಾಲ ಮರುಪಾವತಿಯಾಗುತ್ತದೆ ಎಂದು ತಿಳಿಸಿದರು. ಮೆಟ್ರೊ ಯೋಜನೆಗಳ ಸಾಲಕ್ಕೆ ಕೇಂದ್ರ ಸರ್ಕಾರದ ಗ್ಯಾರಂಟಿ ಸಿಕ್ಕ ಮೇಲೆಯೇ ಸಾಲ ಲಭ್ಯವಾಗುತ್ತದೆ. ಈ ವಿಚಾರದಲ್ಲಿ ಜನರಿಗೆ ತಪ್ಪು ಮಾಹಿತಿ ನೀಡಿ ದಾರಿ ತಪ್ಪಿಸುವ ಕೆಲಸ ಮಾಡಬಾರದು ಎಂದು ಎಚ್ಚರಿಸಿದರು. ತಾವೂ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ 'ಆರೆಂಜ್ ಲೈನ್' (Orange Line) ಮೆಟ್ರೋ ಮಾರ್ಗಕ್ಕಾಗಿ 2,500 ಕೋಟಿ ರೂಪಾಯಿಗಳನ್ನುನೀಡಿದ್ದಾಗಿ ತಿಳಿಸಿದ ಅವರು, ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಮೆಟ್ರೋ ಮಾರ್ಗಗಳಿಗೆ ಅಗತ್ಯವಿರುವ ಎಲ್ಲಾ ಅನುಮತಿಗಳನ್ನು ಕೊಡಿಸುವುದಾಗಿ ಭರವಸೆ ನೀಡಿದರು. ಅಲ್ಲದೆ, ಮೆಟ್ರೋ ಯೋಜನೆಗಳಲ್ಲಿ ಕೇಂದ್ರ ಹಾಗೂ ರಾಜ್ಯಸರ್ಕಾರದ ಪಾಲು 50:50 ಇರುತ್ತದೆ ಎಂದರು.

ದೇವಸ್ಥಾನ ವ್ಯವಸ್ಥಾಪನಾ ಸಮಿತಿ ರಚನೆ : ಅರ್ಜಿ ಆಹ್ವಾನ

ಮಂಗಳೂರು-ಕರ್ನಾಟಕ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಕಾಯ್ದೆ 1997ರ ಕಲಂ 25ರನ್ವಯ ದ.ಕ ಜಿಲ್ಲೆಯ ಪ್ರವರ್ಗ 'ಸಿ'ವರ್ಗದ 2 ಅಧಿಸೂಚಿತ ಸಂಸ್ಥೆಗಳಿಗೆ 9 ಜನ ಸದಸ್ಯರಿರುವ ವ್ಯವಸ್ಥಾಪನಾ ಸಮಿತಿಯನ್ನು ರಚಿಸುವ ಸಲುವಾಗಿ ಹಾಗೂ ಖಾಲಿ ಇರುವ ವಿವಿಧ ದೇವಸ್ಥಾನಗಳ ಸದಸ್ಯ ಸ್ಥಾನಗಳಿಗೆ ಆಸಕ್ತ ಭಕ್ತಾಧಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ. ನಿಗದಿತ ಅರ್ಜಿ ನಮೂನೆಯು ಸಹಾಯಕ ಆಯುಕ್ತರು ಧಾರ್ಮಿಕ ದತ್ತಿ ಇಲಾಖೆ ಮಂಗಳೂರು ಕಛೇರಿಯಲ್ಲಿ ಲಭ್ಯವಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಮಹಿಳಾ ಅಭಿವೃದ್ಧಿ ನಿಗಮದ ವಿವಿಧ ಯೋಜನೆ: ಅರ್ಜಿ ಆಹ್ವಾನ

ಮಂಗಳೂರು :- 2026-27ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಧನಶ್ರೀ ಯೋಜನೆ, ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ, ಚೇತನ ಯೋಜನೆ ಹಾಗೂ ಉದ್ಯೋಗಿನಿ ಯೋಜನೆಗಳಿಗೆ ಸೇವಾ ಸಿಂಧು ಪೋರ್ಟಲ್‌ನಲ್ಲಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ:- 0824-2451254, 9480155501 ಸಂಪರ್ಕಿಸಬಹುದು.


ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನ

ಶಿವಮೊಗ್ಗ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಿಂದ 2026-27 ನೇ ಸಾಲಿನಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಮಾಹಿತಿ ಶಿಕ್ಷಣ ಸಂವಹನ (ಐ.ಇ.ಸಿ) ಕಾರ್ಯಕ್ರಮದಡಿ ಆರೋಗ್ಯ ಇಲಾಖೆಯ ಕಾರ್ಯಕ್ರಮಗಳು ಮತ್ತು ಯೋಜನೆಗಳ ಬಗ್ಗೆ ಜಾನಪದ ಕಲಾ ಪ್ರಾಕಾರದ ಬೀದಿ ನಾಟಕಗಳ ಮೂಲಕ ಸಾರ್ವಜನಿಕರಿಗೆ ಅರಿವು ಮೂಡಿಸಲು ಅರ್ಹ ಜಾನಪದ ಕಲಾ ತಂಡಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯ ಐ.ಇ.ಸಿ ವಿಭಾಗವನ್ನು ಸಂಪರ್ಕಿಸಬೇಕೆಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ನಟರಾಜ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಡಿಕೇರಿ: ಪ್ರಸಕ್ತ (2026-27) ಸಾಲಿನ ಸಮನ್ವಯ ಶಿಕ್ಷಣ ಚಟುವಟಿಕೆಗಳ ಯಶಸ್ವಿ ಅನುಷ್ಠಾನಕ್ಕಾಗಿ 02 ಕ್ಷೇತ್ರ ಸಂಪನ್ಮೂಲ ಕೇಂದ್ರಗಳಲ್ಲಿ 02 ಮಾನಸಿಕ ಆರೋಗ್ಯ ಸಲಹೆಗಾರರ ನೇಮಕಾತಿ ಮಾಡುವ ಸಂಬಂಧ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂ. 9448999344, 9448999400 ಸಂಪರ್ಕಿಸಬಹುದು.

ಭಾರತೀಯ ಸಶಸ್ತ್ರ ಪಡೆಗಳಲ್ಲಿ ವೃತ್ತಿಜೀವನ ರೂಪಿಸಿಕೊಳ್ಳಿ : ಕರ್ನಲ್ ಮಹಾರಾಜನ್



ಮಂಗಳೂರು : ಮಂಗಳೂರಿನ ಬ್ಯಾರೀಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ (ಬಿಐಟಿ) ಯಲ್ಲಿ ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಪದವಿ ಮತ್ತು ಪದವಿಪೂರ್ವ ಕೋರ್ಸ್‌ಗಳ ವಿದ್ಯಾರ್ಥಿಗಳಿಗಾಗಿ 'ಯುವ ಮನಸುಗಳಿಗೆ ಸ್ಫೂರ್ತಿ: ಭಾರತೀಯ ಸಶಸ್ತ್ರ ಪಡೆಗಳಲ್ಲಿ ವೃತ್ತಿಜೀವನ' ಕುರಿತು ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮಂಗಳೂರಿನ ಸೇನಾ ನೇಮಕಾತಿ ಕಚೇರಿಯ ನಿರ್ದೇಶಕ ಕರ್ನಲ್ ಸೋಮು ಮಹಾರಾಜನ್ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು. ಭಾರತೀಯ ಸಶಸ್ತ್ರ ಪಡೆಗಳಲ್ಲಿ ವೃತ್ತಿಜೀವನ ರೂಪಿಸಿಕೊಳ್ಳುವುದು ಕೇವಲ ಉದ್ಯೋಗದ ಆಯ್ಕೆಯಲ್ಲ, ರಾಷ್ಟ್ರ ಸೇವೆ ಸಲ್ಲಿಸುವ ಹೆಮ್ಮೆಯ ಅವಕಾಶವೂ ಹೌದು ಎಂದು ಅವರು ತಿಳಿಸಿದರು. ಶಿಸ್ತು, ಸಮರ್ಪಣಾ ಭಾವ, ನಾಯಕತ್ವ ಬದ್ಧತೆ ಮತ್ತು ದೇಶಭಕ್ತಿಯನ್ನು ಮೈಗೂಡಿಸಿಕೊಂಡು ಯುವಜನರು ರಕ್ಷಣಾ ಸೇವೆಗಳಿಗೆ ಸೇರ್ಪಡೆಯಾಗಬೇಕು ಎಂದು ಅವರು ಕರೆ ನೀಡಿದರು. ಸಶಸ್ತ್ರ ಪಡೆಗಳಲ್ಲಿ ಲಭ್ಯವಿರುವ ವಿವಿಧ ವೃತ್ತಿ ಅವಕಾಶಗಳ ಕುರಿತು ಮಾಹಿತಿ ನೀಡಿದ ಅವರು, ರಕ್ಷಣಾ ಸೇವೆಯಲ್ಲಿ ಯಶಸ್ಸು ಸಾಧಿಸಲು ಅಗತ್ಯವಿರುವ ಶಿಸ್ತು, ಸಮರ್ಪಣಾ ಮನೋಭಾವ, ನಾಯಕತ್ವ ಗುಣ ಮತ್ತು ಬದ್ಧತೆಯ ಮಹತ್ವವನ್ನು ವಿವರಿಸಿದರು.

ಎಸ್.ಐ.ಆರ್. ವಿರೋಧಿ ಪ್ರತಿಭಟನೆಯಿಂದ ಶಾಸಕ ಅಶೋಕ್ ರೈ ಗೈರು !



ಪುತ್ತೂರು: ಪುತ್ತೂರಿನಲ್ಲಿ ನವೆಂಬರ್ 9ರಂದು ಎಸ್‌ಐಆರ್ (ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ) ವಿರುದ್ಧ ಇಂಡಿಯಾ ಒಕ್ಕೂಟದ ನೇತೃತ್ವದಲ್ಲಿ ನಡೆದ ತಿರಂಗಾ ಜಾಥಾ ಹಾಗೂ ಪ್ರತಿಭಟನಾ ಸಭೆಗೆ ಕ್ಷೇತ್ರದ ಶಾಸಕ ಅಶೋಕ್ ರೈ ಗೈರುಹಾಜರಾಗಿರುವುದು ಕಾಂಗ್ರೆಸ್ ವಲಯದಲ್ಲಿ ತೀವ್ರ ಅಸಮಾಧಾನಕ್ಕೆ ಕಾರಣವಾಗಿದೆ. ರಾಜ್ಯಾದ್ಯಂತ ಕಾಂಗ್ರೆಸ್ ಹೈಕಮಾಂಡ್ ಸೂಚನೆಯಂತೆ ಆಯೋಜಿಸಲಾಗಿದ್ದ ಈ ಪ್ರಮುಖ ಹೋರಾಟದಲ್ಲಿ ಸ್ಥಳೀಯ ಶಾಸಕರು ಮುಂಚೂಣಿಯಲ್ಲಿ ನಿಲ್ಲಬೇಕಿತ್ತು. ಆದರೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸದ ಅವರು, ಖಾಸಗಿ ಡಿಜಿಟಲ್ ಸುದ್ದಿ ವಾಹಿನಿಯ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ಕಾರ್ಯಕರ್ತರಲ್ಲಿ ನಿರಾಶೆ ಮೂಡಿಸಿದೆ. ಶಾಸಕರ ಕಚೇರಿಯ ಸಮೀಪದಲ್ಲೇ ಪ್ರತಿಭಟನೆ ನಡೆದಿದ್ದರೂ ಕಚೇರಿಯಲ್ಲಿದ್ದ ಶಾಸಕರು ಸ್ಥಳಕ್ಕೆ ಬಾರದೆ ದೂರ ಉಳಿದಿರುವುದು ಹಾಗೂ ಪಕ್ಷದ ಹೋರಾಟವನ್ನು ಕಡೆಗಣಿಸಿ ಖಾಸಗಿ ಕಾರ್ಯಕ್ರಮಕ್ಕೆ ತೆರಳಿರುವ ನಡೆ ಹಲವು ಸಂಶಯಗಳು ಮತ್ತು ಪ್ರಶ್ನೆಗಳಿಗೆ ಎಡೆಮಾಡಿಕೊಟ್ಟಿದೆ. ಈ ಪ್ರತಿಭಟನಾ ಸಭೆಯಲ್ಲಿ ಕೆಪಿಸಿಸಿ ವಕ್ತಾರರಾದ ಎಂ.ಜಿ. ಹೆಗ್ಡೆ, ಕಾವ್ರ ಹೇಮನಾಥ ಶೆಟ್ಟಿ ಸೇರಿದಂತೆ ಹಲವು ಮುಖಂಡರು ಭಾಗವಹಿಸಿ ಮಾತನಾಡಿದ್ದರು. ಈ ಕುರಿತು ಪಕ್ಷದ ವಲಯದಲ್ಲಿ ಚರ್ಚೆಗಳು ನಡೆಯುತ್ತಿದ್ದು, ಕಾರ್ಯಕರ್ತರು ಅತೃಪ್ತಿ ವ್ಯಕ್ತಪಡಿಸಿದ್ದರೂ ಈವರೆಗೆ ಯೂ ಬಹಿರಂಗವಾಗಿ ಅಧಿಕೃತ ಹೇಳಿಕೆ ನೀಡಿಲ್ಲ.

ನವೆಂಬರ್ 22 ರಂದು ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಯುವಜನೋತ್ಸವ



ಮಂಗಳೂರು : ದಕ್ಷಿಣ ಕನ್ನಡ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಕಡಬ ತಾಲೂಕು ಪಂಚಾಯತ್, ಮೈ ಭಾರತ್ ದಕ್ಷಿಣ ಕನ್ನಡ, ಜಿಲ್ಲಾ ಯುವಜನ ಒಕ್ಕೂಟ, ಸವಣೂರು ಗ್ರಾಮ ಪಂಚಾಯತ್ ಹಾಗೂ ಸವಣೂರು ಯುವಕ ಮಂಡಲದ ಸಂಯುಕ್ತಾಶ್ರಯದಲ್ಲಿ 2026-27ನೇ ಸಾಲಿನ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಯುವಜನೋತ್ಸವವನ್ನು ನವೆಂಬರ್ 22 ರಂದು ಬೆಳಿಗ್ಗೆ 9 ಗಂಟೆಗೆ ಸವಣೂರಿನ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಲಾಗಿದೆ. ಈ ಯುವಜನೋತ್ಸವದಲ್ಲಿ ಜನಪದ ನೃತ್ಯ (ಗುಂಪು), ಜನಪದ ಗೀತೆ (ಗುಂಪು), ಚಿತ್ರಕಲೆ (ವೈಯಕ್ತಿಕ), 'ನಶಾ ಮುಕ್ತ ಯುವ' ವಿಷಯದ ಕುರಿತು ಬೀದಿ ನಾಟಕ ಹಾಗೂ ಕವಿತೆ ಬರೆಯುವ (ವೈಯಕ್ತಿಕ) ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ. 2026ರ ಆಗಸ್ಟ್ 17ಕ್ಕೆ ಅನ್ವಯಿಸುವಂತೆ 15 ರಿಂದ 29 ವರ್ಷದೊಳಗಿನ ದಕ್ಷಿಣ ಕನ್ನಡ ಜಿಲ್ಲೆಯ ಯುವಕ-ಯುವತಿಯರು ಮತ್ತು ಶಾಲಾ-ಕಾಲೇಜು ವಿದ್ಯಾರ್ಥಿಗಳು ಭಾಗವಹಿಸಲು ಅರ್ಹರಾಗಿರುತ್ತಾರೆ. ಸ್ಪರ್ಧಿಗಳು ವಯಸ್ಸಿನ ದೃಢೀಕರಣಕ್ಕಾಗಿ ಎಸ್‌ಎಸ್‌ಎಲ್‌ಸಿ ಅಂಕಪಟ್ಟಿ, ಜನನ ಪ್ರಮಾಣಪತ್ರ ಅಥವಾ ಆಧಾರ್ ಕಾರ್ಡ್ ಪ್ರತಿ ಸಲ್ಲಿಸುವುದು ಕಡ್ಡಾಯವಾಗಿದೆ.

FMCIಯಲ್ಲಿ ನೂತನ ಆಡಳಿತ ಮಂಡಳಿ ಕಟ್ಟಡಕ್ಕೆ ಶಂಕುಸ್ಥಾಪನೆ



ಮಂಗಳೂರು : ಮಂಗಳೂರಿನ ಕಂಕನಾಡಿಯ ಫಾದರ್ ಮುಲ್ಲರ್ ಚಾರಿಟೇಬಲ್ ಸಂಸ್ಥೆಯು (FMCI) ತನ್ನ ಮೂಲ ಸೌಕರ್ಯ ಅಭಿವೃದ್ಧಿಯ ಭಾಗವಾಗಿ ನೂತನ ಆಡಳಿತ ಮಂಡಳಿ ಕಟ್ಟಡ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಿತು. ಸಂಸ್ಥೆಯ ಸೇಂಟ್ ಜೋಸೆಫ್ ಚಾಪೆಲ್‌ನಲ್ಲಿ ಮಂಗಳೂರು ಧರ್ಮಪ್ರಾಂತ್ಯದ ಅಧ್ಯಕ್ಷ ಹಾಗೂ ಸಂಸ್ಥೆಯ ಅಧ್ಯಕ್ಷರಾದ ಬಿಷಪ್ ವಂ। ಡಾ। ಪೀಟರ್ ಪೌಲ್ ಸಲ್ಡಾನ್ಹಾ ಅವರ ಮುಖ್ಯ ಸಾನ್ನಿಧ್ಯದಲ್ಲಿ ದಿವ್ಯ ಬಲಿಪೂಜೆ ನೆರವೇರಿತು. ತದನಂತರ ಹೊಸ ಕಟ್ಟಡ ನಿರ್ಮಾಣದ ಜಾಗದಲ್ಲಿ ಶಂಕುಸ್ಥಾಪನೆ ನೆರವೇರಿಸಿ ಆಶೀರ್ವದಿಸಲಾಯಿತು. ಈ ಕಾರ್ಯಕ್ರಮದಲ್ಲಿ ಎನ್‌ಆರ್‌ಐ ಉದ್ಯಮಿ ಮೈಕಲ್ ಡಿಸೋಜ ಅವರು ಮುಖ್ಯ ಅತಿಥಿಯಾಗಿ ತಮ್ಮ ಧರ್ಮಪತ್ನಿ ಫ್ಲೇವಿಯಾ ಡಿಸೋಜ ಹಾಗೂ ಪುತ್ರ ಆಡ್ರಿಯನ್ ಡಿಸೋಜ ಅವರೊಂದಿಗೆ ಭಾಗವಹಿಸಿದ್ದರು. ಸಂಸ್ಥೆಯ ನಿರ್ದೇಶಕರಾದ ವಂ। ಫಾಸ್ಟಿನ್ ಲೂಕಾಸ್ ಲೋಬೊ ಹಾಗೂ ಫಾದರ್ ಮುಲ್ಲರ್ ಮೆಡಿಕಲ್ ಕಾಲೇಜಿನ ಆಡಳಿತಾಧಿಕಾರಿ ವಂದನೀಯ ಡಾ। ಮೈಕಲ್ ಸಾಂತುಮಾಯೋರ್ ಕಾರ್ಯಕ್ರಮವನ್ನು ಸಂಘಟಿಸಿದರು. ಫಾದರ್ ಮುಲ್ಲರ್ ಕನ್ವೆನ್ಷನ್ ಸೆಂಟರ್‌ನಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಎಸ್.ಕೆ.ಎಸ್ ಅಸೋಸಿಯೇಟ್ಸ್‌ನ ಎಂಜಿನಿಯರ್ ಸನಾಥ್ ಶೆಟ್ಟಿ ಅವರು ವಿನ್ಯಾಸಗೊಳಿಸಿದ ಪರಿಸರ ಸ್ನೇಹಿ ಹಾಗೂ ಸೌರಶಕ್ತಿ ಆಧಾರಿತ ನೂತನ ಕಟ್ಟಡದ ನೀಲನಕ್ಷೆಯನ್ನು ಮೈಕಲ್ ಡಿಸೋಜ ಅವರು ಅನಾವರಣಗೊಳಿಸಿದರು.

ಸೇವಾಂಜಲಿ ಚಾರಿಟೇಬಲ್ ಟ್ರಸ್ಟ್‌ನಿಂದ ಬಡ ಕುಟುಂಬಗಳಿಗೆ ಬಟ್ಟೆ ವಿತರಣೆ



ಮಂಗಳೂರು: ಆರ್ಥಿಕವಾಗಿ ಹಿಂದುಳಿದು, ದೀಪಾವಳಿ ಹಬ್ಬವನ್ನು ಸಂಭ್ರಮದಿಂದ ಆಚರಿಸಲು ಕಷ್ಟಪಡುವ ಬಡ ಕುಟುಂಬಗಳ ಮೊಗದಲ್ಲಿ ಮಂದಹಾಸ ಮೂಡಿಸುವ ಸದುದ್ದೇಶದಿಂದ ಮಂಗಳೂರಿನ ಪ್ರತಿಷ್ಠಿತ ಸಮಾಜಮುಖಿ ಸೇವಾಸಂಸ್ಥೆಯಾದ 'ಸೇವಾಂಜಲಿ ಚಾರಿಟೇಬಲ್ ಟ್ರಸ್ಟ್' ವತಿಯಿಂದ ಫಲಾನುಭವಿಗಳಿಗೆ ಹಬ್ಬದೂಟಕ್ಕೆ ಬೇಕಾಗುವ ಅಗತ್ಯ ವಸ್ತುಗಳು ಹಾಗೂ ಹೊಸ ಬಟ್ಟೆಗಳನ್ನು ಒಳಗೊಂಡ ವಿಶೇಷ ಕಿಟ್‌ಗಳನ್ನು ವಿತರಿಸಿ, ದೀಪಾವಳಿ ಹಬ್ಬದ ಶುಭಕೋರಲಾಯಿತು. ಮಂಗಳೂರಿನ ಬಜಿಲಕೇರಿಯಲ್ಲಿರುವ 'ಸೇವಾಂಜಲಿ ಏರೆನಾ'ದಲ್ಲಿ ನಡೆದ ಈ ಸಾರ್ಥಕ ಕಾರ್ಯಕ್ರಮದಲ್ಲಿ ಆರ್ಥಿಕ ಸಂಕಷ್ಟದಲ್ಲಿದ್ದ ಹಲವಾರು ಕುಟುಂಬಗಳಿಗೆ ನೆರವು ನೀಡಲಾಯಿತು. ಹಬ್ಬದ ದಿನದಂದು ಪ್ರತಿಯೊಬ್ಬರ ಮನೆಯಲ್ಲೂ ಮಧುರವಾದ ಊಟ ತಯಾರಾಗಬೇಕು ಮತ್ತು ಬಡತನದ ಕಾರಣಕ್ಕೆ ಯಾರೂ ಹಬ್ಬದ ಖುಷಿಯಿಂದ ವಂಚಿತರಾಗಬಾರದು ಎಂಬ ಉದಾತ್ತ ಚಿಂತನೆಯೊಂದಿಗೆ ಟ್ರಸ್ಟ್ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಫಲಾನುಭವಿಗಳಿಗೆ ವಿತರಿಸಲಾದ ಈ ಹಬ್ಬದೂಟದ ಕಿಟ್‌ನಲ್ಲಿ ದೀಪಾವಳಿ ಆಚರಣೆಗೆ ಹಾಗೂ ಅಡುಗೆಗೆ ಅಗತ್ಯವಿರುವ ಸಮಗ್ರ ಸಾಮಗ್ರಿಗಳನ್ನು ಒದಗಿಸಲಾಗಿತ್ತು.

ನಿನ್ನಿಕಲ್ಲು ಪಾದೆಯಲ್ಲಿ 1,008 ದೀಪಗಳ ಬಲಿಪರ್ಬ ಆಚರಣೆ



ಮಂಗಳೂರು : ಕಾಪುವಿನ ಐತಿಹಾಸಿಕ ಅಡ್ವೆ ನಂದಿಕೂರಿನ ನಿನ್ನಿಕಲ್ಲು ಪಾದೆಯಲ್ಲಿ ತುಳುವ ಮಹಾಸಭೆಯ ಕಾಪು ವಲಯ ಸಮಿತಿ ಹಾಗೂ ಗ್ರಾಮಸ್ಥರ ಸಹಯೋಗದೊಂದಿಗೆ 1,008 ಹಣತೆಗಳನ್ನು ಬೆಳಗಿಸುವ ಮೂಲಕ ಬಲಿಪರ್ಬವನ್ನು ಅತ್ಯಂತ ಭಕ್ತಿಭಾವದಿಂದ ಆಚರಿಸಲಾಯಿತು. ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ದಯಾನಂದ ಜಿ. ಕತ್ತಲ್‌ಸಾರ್ ಹಾಗೂ ಹಿರಿಯ ಜಾನಪದ ಕಲಾವಿದ ಬಾಲಕೃಷ್ಣ ಕತ್ತಲ್‌ಸಾರ್ ಸಾಂಪ್ರದಾಯಿಕ 'ಬಲಿಂದ್ರ ಲೆಪ್ಪು' ನೀಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ದಯಾನಂದ ಕತ್ತಲ್‌ಸಾರ್, ಬಲಿಚಕ್ರವರ್ತಿಯ ಸತ್ಯ ಮತ್ತು ಧರ್ಮದ ತುಳು ರಾಜ್ಯ ಮರಳಿ ಬರಲಿ ಎಂದು ಆಶಿಸಿದರು. ಕಾರ್ಯಕ್ರಮದಲ್ಲಿ ತುಳುವರ್ಲ್ಡ್ ಫೌಂಡೇಶನ್ ಹಾಗೂ ತುಳುವ ಮಹಾಸಭೆಯ ಪದಾಧಿಕಾರಿಗಳು ಸೇರಿದಂತೆ ನೂರಾರು ಭಕ್ತರು ಭಾಗವಹಿಸಿದ್ದರು.

ವಿವೇಕಾನಂದ ಪದವಿಪೂರ್ವ ಕಾಲೇಜಿನಿಂದ 'ಮೇಧಾ-2027'



ಪುತ್ತೂರು : ಪುತ್ತೂರಿನ ವಿವೇಕಾನಂದ ಪದವಿಪೂರ್ವ ಕಾಲೇಜು ವತಿಯಿಂದ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗಾಗಿ ಹಮ್ಮಿಕೊಳ್ಳಲಾಗಿರುವ 'ಮೇಧಾ-2027' ಉಚಿತ ಶಿಕ್ಷಣ ಯೋಜನೆಯ ಪ್ರವೇಶ ಪರೀಕ್ಷೆಯು ಡಿಸೆಂಬರ್ 6, 2026ರಂದು ನಡೆಯಲಿದೆ. ದಕ್ಷಿಣ ಕನ್ನಡ, ಕಾಸರಗೋಡು, ಕೊಡಗು, ಹಾಸನ ಹಾಗೂ ತುಮಕೂರು ಜಿಲ್ಲೆಗಳ 9 ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಬೆಳಗ್ಗೆ 10 ಗಂಟೆಗೆ ಏಕಕಾಲದಲ್ಲಿ ಈ ಪರೀಕ್ಷೆ ಜರುಗಲಿದೆ. 9 ಹಾಗೂ 10ನೇ ತರಗತಿಯ ಗಣಿತ, ವಿಜ್ಞಾನ ಮತ್ತು ಸಾಮಾನ್ಯ ಜ್ಞಾನ ವಿಷಯಗಳನ್ನು ಆಧರಿಸಿ 120 ನಿಮಿಷಗಳ ಕಾಲ ಕನ್ನಡ ಹಾಗೂ ಆಂಗ್ಲ ಮಾಧ್ಯಮದಲ್ಲಿ ಪರೀಕ್ಷೆ ನಡೆಯಲಿದ್ದು, ವಿಜ್ಞಾನ, ವಾಣಿಜ್ಯ ಮತ್ತು ಕಲಾ ವಿಭಾಗಗಳಿಗೆ ಸೇರಬಯಸುವ ವಿದ್ಯಾರ್ಥಿಗಳು ಇದನ್ನು ಬರೆಯಬಹುದಾಗಿದೆ. ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳಿಗೆ ಶೇ. 100ರಷ್ಟು ಉಚಿತ ಶಿಕ್ಷಣದ ಸೌಲಭ್ಯ ದೊರೆಯಲಿದೆ. ಆಸಕ್ತ ವಿದ್ಯಾರ್ಥಿಗಳು ನವೆಂಬರ್ 30ರೊಳಗೆ www.vivekanandapuc.com/medha ಜಾಲತಾಣದ ಮೂಲಕ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ 8971924424, 8105072386 ಹಾಗೂ 8073700468 ದೂ. ಸಂಖ್ಯೆಗಳನ್ನು ಸಂಪರ್ಕಿಸಬಹುದಾಗಿದೆ.

ಆಳ್ವಾಸ್ ಸಹಕಾರ ಸಂಘಕ್ಕೆ ಡಾ.ಮೋಹನ್ ಆಳ್ವ ಅಧ್ಯಕ್ಷರಾಗಿ ಆಯ್ಕೆ



ಮೂಡುಬಿದಿರೆ: ಇಲ್ಲಿನ ಆಳ್ವಾಸ್ ಸಹಕಾರ ಸಂಘ ನಿಯಮಿತದ ಮುಂದಿನ ಐದು ವರ್ಷಗಳ ಅವಧಿಯ ಆಡಳಿತ ಮಂಡಳಿಯ ಅಧ್ಯಕ್ಷರಾಗಿ ಡಾ. ಎಂ. ಮೋಹನ್ ಆಳ್ವ ಹಾಗೂ ಉಪಾಧ್ಯಕ್ಷರಾಗಿ ಎ. ಮೋಹನ್ ಪಡಿವಾಳ್ ಅವರು ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ. ಈ ಸಂಸ್ಥೆಯ ನಿರ್ದೇಶಕರಾಗಿ ಜಯಶ್ರೀ ಎ. ಶೆಟ್ಟಿ, ಶ್ರೀಪತಿ ಭಟ್, ನಾರಾಯಣ ಪಿ.ಎಂ., ಜಯರಾಮ್ ಕೋಟ್ಯಾನ್, ವಿವೇಕ್ ಆಳ್ವ, ಪ್ರಣೀತ್ ಕುಮಾರ್, ಪ್ರಕಾಶಿನಿ ವಿ. ಹೆಗ್ಡೆ, ಡಾ. ಕುರಿಯನ್, ಎಸ್. ಸೀತಾರಾಮ ಶೆಟ್ಟಿ, ರಾಮಚಂದ್ರ ಮಿಜಾರು, ಮೊಹಮ್ಮದ್ ಷರೀಫ್, ಅಶ್ವಿನ್ ಜೊಸ್ಸಿ ಪಿರೇರಾ ಹಾಗೂ ಮೀನಾಕ್ಷಿ ಬಿ. ಅವರು ಆಯ್ಕೆಯಾಗಿದ್ದಾರೆ. ಸಹಕಾರ ಸಂಘಗಳ ಚುನಾವಣಾ ರಿಟರ್ನಿಂಗ್ ಅಧಿಕಾರಿ ಎನ್.ಜೆ. ಗೋಪಾಲ್ ಅವರು ನೂತನ ಪದಾಧಿಕಾರಿಗಳು ಹಾಗೂ ನಿರ್ದೇಶಕರ ಆಯ್ಕೆಯನ್ನು ಅಧಿಕೃತವಾಗಿ ಘೋಷಿಸಿದ್ದಾರೆ.

ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಸಿಐಎಸ್‌ಎಫ್‌ನಿಂದ ಗೌರವ



ಮಂಗಳೂರು : ಕೇಂದ್ರ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್‌ಎಫ್) ವತಿಯಿಂದ 2026ರ ಫೆಬ್ರವರಿ ತಿಂಗಳಲ್ಲಿ 'ಸುರಕ್ಷಿತ ತಟ್, ಸಮೃದ್ಧ ಭಾರತ್' ಎಂಬ ಧ್ಯೇಯವಾಕ್ಯದೊಂದಿಗೆ ಆಯೋಜಿಸಲಾಗಿದ್ದ 'ಸಿಐಎಸ್‌ಎಫ್ ಸೈಕ್ಲೋಥಾನ್-2026'ರ ಅಂಗವಾಗಿ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಗೆ ಗೌರವ ಸ್ಮರಣಿಕೆಯನ್ನು ಹಸ್ತಾಂತರಿಸಲಾಯಿತು. ಕರಾವಳಿ ಭದ್ರತೆ, ರಾಷ್ಟ್ರೀಯ ಏಕತೆ ಹಾಗೂ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಈ ಸೈಕಲ್ ಜಾಥಾವನ್ನು ಆಯೋಜಿಸಲಾಗಿತ್ತು. ಸಿಐಎಸ್‌ಎಫ್‌ನ 80 ಸೈಕಲ್ ಸವಾರರು ಭಾಗವಹಿಸಿದ್ದ ಈ ಜಾಥಾವು ಭಾರತದ ಸಂಪೂರ್ಣ ಪಶ್ಚಿಮ ಕರಾವಳಿಯನ್ನು ಒಳಗೊಂಡಂತೆ ಸಂಚರಿಸಿತ್ತು. ಈ ಪ್ರಮುಖ ಅಭಿಯಾನದ ನೆನಪಿನಲ್ಲಿ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಗಳಿಗೆ ಮೆಚ್ಚುಗೆಯ ಸಂಕೇತವಾಗಿ ಸಿಐಎಸ್‌ಎಫ್ ಈ ಗೌರವವನ್ನು ಸಮರ್ಪಿಸಿದೆ. ಮಂಗಳೂರಿನ ನವಮಂಗಳೂರು ಬಂದರು ಪ್ರಾಧಿಕಾರದ (ಎನ್‌ಎಂಪಿಎ) ಸಿಐಎಸ್‌ಎಫ್ ಘಟಕದ ಉಪ ಕಮಾಂಡೆಂಟ್ ಆರ್. ಪಿ. ಪಾಠಕ್ ಅವರು ಧರ್ಮಸ್ಥಳದಲ್ಲಿ ಡಾ. ಡಿ. ವೀರೇಂದ್ರ ಹೆಗ್ಗಡೆಯವರನ್ನು ಭೇಟಿಯಾಗಿ ಈ ಸ್ಮರಣಿಕೆಯನ್ನು ಹಸ್ತಾಂತರಿಸಿದರು.

ಸುದ್ದಿ ತುಣುಕು

ಶಿವಮೊಗ್ಗ ವಿಮಾನ ನಿಲ್ದಾಣದಲ್ಲಿ ವಿಮಾನ ಹಾರಾಟ ಸಂಪೂರ್ಣ ರದ್ದಾಗಲಿದ್ದು, ಪುನಃ ವಿಮಾನ ಪ್ರಾರಂಭವಾಗಬೇಕಾದರೆ ಅಂದಾಜು ಕನಿಷ್ಠ ಮೂರು ತಿಂಗಳು ಬೇಕಾಗುತ್ತದೆ ಎಂದು ಕೆಎಸ್‌ಐಐಡಿಸಿ ಅಧ್ಯಕ್ಷರು ಹೇಳಿದ್ದಾರೆ.

ಸ್ನೇಹಿತನ ನಂಬಿಕೆ ದುರುಪಯೋಗಪಡಿಸಿಕೊಂಡು ಆತನ ಬ್ಯಾಂಕ್ ಖಾತೆಗೆ ಸೈಬರ್ ವಂಚನೆಯ ಹಣವನ್ನು ವರ್ಗಾಯಿಸಿ, ಬಳಿಕ ನಗದು ರೂಪದಲ್ಲಿ ಪಡೆದು ವಂಚಿಸಿರುವ ಘಟನೆ ಮಂಗಳೂರಿನಲ್ಲಿ ಬೆಳಕಿಗೆ ಬಂದಿದೆ.

ಇಲಾಖಾ ದಾಖಲೆಗಳಲ್ಲಿ ಅಧಿಕಾರಿಗಳು ಮಾಡುವ ತಪ್ಪುಗಳಿಗೆ ವಿದ್ಯಾರ್ಥಿಗಳು ಅಥವಾ ಪೋಷಕರು ಹೊಣೆಯಲ್ಲ. ಆಡಳಿತಾತ್ಮಕ ನಿರ್ಲಕ್ಷ್ಯಕ್ಕೆ ನಿರುದ್ಯೋಗಿಯೊಬ್ಬ ತನ್ನ ತುತ್ತಿನ ಚೀಲ ಕಳೆದುಕೊಳ್ಳುವಂತಾಗಬಾರದು ಎಂದು ಹೈಕೋರ್ಟ್ ತಿಳಿಸಿದೆ.

ಟೋಯಿಂಗ್ ವಾಹನವನ್ನು ಸರಿಯಾಗಿ ಮಾರ್ಪಾಡು ಮಾಡಿಕೊಡದೆ ಸೇವಾ ನ್ಯೂನ್ಯತೆ ಎಸಗಿರುವ ಹಿನ್ನೆಲೆಯಲ್ಲಿ, ದೂರುದಾರರಿಗೆ ಹಣ ಮರುಪಾವತಿಸುವಂತೆ ಹಾಗೂ ಪರಿಹಾರ ನೀಡುವಂತೆ ಶಿವಮೊಗ್ಗ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಆದೇಶಿಸಿದೆ.

ಕಾಳೇನ ಅಗ್ರಹಾರದಿಂದ ತಾವರೆಕೆರೆ ನಿಲ್ದಾಣದವರೆಗಿನ 7.5 ಕಿ.ಮೀ ವಿಸ್ತರಿತ ಗುಲಾಬಿ ಮಾರ್ಗದ ನಮ್ಮ ಮೆಟ್ರೊ ರೈಲಿನ ಸಂಚಾರಕ್ಕೆ ಪ್ರಧಾನಿ ಮೋದಿ ವಿದ್ಯುಕ್ತವಾಗಿ ಚಾಲನೆ ನೀಡಲಿದ್ದಾರೆ.

ದೀಪಾವಳಿ ಆಚರಣೆ ಸಂದರ್ಭದಲ್ಲಿ ನಗರದ ಎರಡು ಪ್ರಮುಖ ಕಣ್ಣಿನ ಆಸ್ಪತ್ರೆಗಳಾದ ಮಿಂಟೋ ನೇತ್ರ ಚಿಕಿತ್ಸಾಲಯ ಮತ್ತು ರಾಜಾಜಿ ನಗರದ ನಾರಾಯಣ ನೇತ್ರಾಲಯದಲ್ಲಿ ಪಟಾಕಿಗಳಿಂದ ಕಣ್ಣಿಗೆ ಗಾಯಗೊಂಡ 108 ಮಂದಿ (ಇದರಲ್ಲಿ 51 ಮಕ್ಕಳು ಸೇರಿದ್ದಾರೆ) ಚಿಕಿತ್ಸೆ ಪಡೆದಿದ್ದಾರೆ.

ನಾನು ಇತಿಹಾಸವನ್ನು ಓದುವುದಕ್ಕಿಂತ ಇತಿಹಾಸವನ್ನು ಸೃಷ್ಟಿಸುವುದರಲ್ಲಿ ನಂಬಿಕೆ ಇಟ್ಟಿದ್ದೇನೆ. ನನ್ನ ನಾಯಕತ್ವದಲ್ಲಿ ಪಕ್ಷ ಅಧಿಕಾರಕ್ಕೆ ಬರಲು ನಮ್ಮ ನಾಯಕರು ಮತ್ತು ಕಾರ್ಯಕರ್ತರು ಎಷ್ಟು ಶ್ರಮಪಟ್ಟಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ನಂಜನಗೂಡು ತಾಲೂಕಿನ ದೊಡ್ಡ ಕವಲಂದೆ ಹೋಬಳಿಯ ಕಾರ್ಯ ಗ್ರಾಮದ ಶ್ರೀ ಸಿದ್ದೇಶ್ವರ ಸ್ವಾಮಿ ಜಾತ್ರೆ ಮೆರವಣಿಗೆ ವೇಳೆ ಎರಡು ಗುಂಪುಗಳ ನಡುವೆ ಘರ್ಷಣೆ ಸಂಭವಿಸಿರುವ ವರದಿಯಾಗಿದೆ.

ಪತ್ನಿ ಮಾಡಿರುವ ನಿರ್ದಿಷ್ಟ ಆರೋಪಗಳಿಗೆ ಸಾಕ್ಷ್ಯಾಧಾರಗಳೇ ಇಲ್ಲದಿರುವಾಗ ಪ್ರಾಥಮಿಕ ಹಂತದಲ್ಲೇ ಕುಟುಂಬ ಸದಸ್ಯರೆಲ್ಲರನ್ನೂ ಕಾನೂನಿನ ಕುಣಿಕೆಯಲ್ಲಿ ಸಿಲುಕಿಸುವುದು ಸಮರ್ಥನೀಯವಲ್ಲ ಎಂದು ಹೈಕೋರ್ಟ್ ಅಭಿಪ್ರಾಯಪಟ್ಟಿದೆ.

ಚ್ಛ ಸರ್ವೇಕ್ಷಣ್ ಪ್ರಶಸ್ತಿಯಡಿ ಮೈಸೂರು ಮಹಾನಗರಪಾಲಿಕೆ ರಾಜ್ಯದ "ಭರವಸೆಯ ಸ್ವಚ್ಛ ನಗರ" (Promising Swachh Shehar of Karnataka) ಎಂಬ ಪ್ರತಿಷ್ಠಿತ ಗೌರವಕ್ಕೆ ಪಾತ್ರವಾಗಿದೆ.

ನಿಷೇಧಾಜ್ಞೆ ಜಾರಿಯಲ್ಲಿದ್ದರೂ ಅಕ್ರಮವಾಗಿ ಗುಂಪುಗೂಡಿ, ಪೊಲೀಸರ ಸೂಚನೆಗೆ ಮಣಿಯದೇ ಘರ್ಷಣೆ ನಡೆಸಿದ ಆರೋಪದಲ್ಲಿ ಬಂಟ್ವಾಳದ ವ್ಯಕ್ತಿಯೊಬ್ಬರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಹೈಕೋರ್ಟ್ ನಿರಾಕರಿಸಿದೆ.

ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 'ರಂಗ ಶಿಕ್ಷಕರ' (ಡ್ರಾಮಾ ಟೀಚರ್) ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದ ನಿಯಮಗಳನ್ನು ಅಂತಿಮಗೊಳಿಸಿ ಸೂಕ್ತ ಮೀಸಲಾತಿ ನಿಗದಿಪಡಿಸಲು ನಿರ್ದೇಶನ ನೀಡುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಕೆಯಾಗಿದೆ.

ಮಕ್ಕಳ ನಿರ್ಲಕ್ಷ್ಯಕ್ಕೆ ಒಳಗಾಗುವ ಪೋಷಕರನ್ನು ರಕ್ಷಿಸುವ ಉದ್ದೇಶದಿಂದ ತೆಲಂಗಾಣ ಸರ್ಕಾರ, ತೆಲಂಗಾಣ ನೌಕರರ ಹೊಣೆಗಾರಿಕೆ ಮತ್ತು ಪೋಷಕರ ಬೆಂಬಲ ಮೇಲ್ವಿಚಾರಣಾ ಕಾಯಿದೆ 2026 ಕಾಯ್ದೆ ಜಾರಿಗೊಳಿಸಲು ಮುಂದಾಗಿದೆ.

ಬೇಸನ್ ಲಾಡು



ಬೇಕಾಗುವ ಸಾಮಗ್ರಿಗಳು :
ಕಡಲೆ ಹಿಟ್ಟು – 1 ಕಪ್
ಪುಡಿ ಸಕ್ಕರೆ – ಅರ್ಧ ಕಪ್
ತುಪ್ಪ – ಅರ್ಧ ಕಪ್
ಗೋಡಂಬಿ – ಅರ್ಧ ಕಪ್
ಏಲಕ್ಕಿ ಪುಡಿ – ಅರ್ಧ ಚಮಚ

ಮಾಡುವ ವಿಧಾನ :
ಮೊದಲು ಕಡಲೆ ಹಿಟ್ಟನ್ನು ಹುರಿದುಕೊಂಡು ಪಕ್ಕದಲ್ಲಿಡಿ. ನಂತರ ಪಾತ್ರೆಯಲ್ಲಿ ಒಂದು ಚಮಚದಷ್ಟು ತುಪ್ಪದಲ್ಲಿ ಕತ್ತರಿಸಿದ ಗೇರುಬೀಜವನ್ನು ಹಾಕಿ ಹುರಿದುಕೊಳ್ಳಬೇಕು ಈಗ ಪಾತ್ರೆಯಲ್ಲಿ ತುಪ್ಪವನ್ನು ಹಾಕಿ ಬಿಸಿ ಮಾಡಿಕೊಂಡು ಹುರಿದ ಕಡಲೆ ಹಿಟ್ಟನ್ನು ಹಾಕಿ ಚೆನ್ನಾಗಿ ಹುರಿಯಬೇಕು. ಇದಕ್ಕೆ ಏಲಕ್ಕಿ ಪುಡಿ ಸೇರಿಸಿ ಮಿಶ್ರ ಮಾಡಿಕೊಂಡು, ಗ್ಯಾಸ್ ಆರಿಸಿ ಈ ಮಿಶ್ರಣಕ್ಕೆ ಸಕ್ಕರೆ ಪುಡಿ, ಗೋಡಂಬಿ, ತುಪ್ಪವನ್ನು ಹಾಕಿ ಚೆನ್ನಾಗಿ ಮಿಶ್ರ ಮಾಡಿಕೊಂಡು ಬಳಿಕ ಇದನ್ನು ಒಂದು ಪಾತ್ರೆಗೆ ವರ್ಗಾಯಿಸಿ, ಕೈಗಳಿಗೆ ಸ್ವಲ್ಪ ತುಪ್ಪ ಹಚ್ಚಿಕೊಂಡು ಹಿಟ್ಟಿನಿಂದ ಲಾಡಿನ ಉಂಡೆಗಳನ್ನು ಕಟ್ಟಲು ಪ್ರಾರಂಭಿಸಿದರೆ ರುಚಿಯಾದ ಬೇಸನ್ ಲಾಡು ಸವಿಯಲು ಸಿದ್ಧವಾಗುತ್ತದೆ.

ಅಬುಧಾಬಿಯಲ್ಲಿ ಅಮೆರಿಕ ರಷ್ಯಾ–ಉಕ್ರೇನ್ ಮಾತುಕತೆ



ಅಬುಧಾಬಿ: ರಷ್ಯಾ ಮತ್ತು ಉಕ್ರೇನ್ ನಡುವಣ ಯುದ್ಧವನ್ನು ಕೊನೆಗೊಳಿಸುವ ಉದ್ದೇಶದಿಂದ ಅಮೆರಿಕದ ಮಧ್ಯಸ್ಥಿಕೆಯಲ್ಲಿ ನಡೆಯುತ್ತಿರುವ ತ್ರಿಪಕ್ಷೀಯ ಮಾತುಕತೆಗಳು ಮಂಗಳವಾರ ಯುಎಇಯ ರಾಜಧಾನಿ ಅಬುಧಾಬಿಯಲ್ಲಿ ಆರಂಭವಾಗಿವೆ. NATO ಮತ್ತು ಯುರೋಪಿಯನ್ ರಾಯಭಾರಿಗಳೊಂದಿಗೆ ನಡೆಸಿದ ಆರಂಭಿಕ ಚರ್ಚೆಗಳ ನಂತರ ಉಕ್ರೇನ್, ಅಮೆರಿಕ ಮತ್ತು ರಷ್ಯಾವನ್ನು ಒಳಗೊಂಡ ತ್ರಿಪಕ್ಷೀಯ ಮಾತುಕತೆಗಳನ್ನು ಪ್ರಾರಂಭಿಸಲಾಗಿದೆ ಎಂದು ಉಕ್ರೇನ್ ವಿದೇಶಿ ಗುಪ್ತಚರ ಸೇವೆಯ ಮುಖ್ಯಸ್ಥ ರುಸ್ಟೆಮ್ ಉಮೆರೊವ್ ಸಾಮಾಜಿಕ ಜಾಲತಾಣದಲ್ಲಿ ಮಾಹಿತಿ ನೀಡಿದ್ದಾರೆ.

ಹೊಸ ಪಾಸ್‌ಪೋರ್ಟ್‌ಗೆ ಶೇಖ್ ಹಸೀನಾ ಮನವಿ



ಢಾಕಾ: ಬೃಹತ್ ಜನಾಂದೋಲನದ ಮೂಲಕ ಅಧಿಕಾರದಿಂದ ಕೆಳಗಿಳಿಸಲ್ಪಟ್ಟು ಎರಡು ವರ್ಷಗಳ ನಂತರ, ಬಾಂಗ್ಲಾದೇಶದ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರು ತಾಯ್ನಾಡಿಗೆ ಮರಳಲು ಅನುಕೂಲವಾಗುವಂತೆ ಹೊಸ ಪಾಸ್‌ಪೋರ್ಟ್ ಹಾಗೂ ರಾಷ್ಟ್ರೀಯ ಗುರುತಿನ ಚೀಟಿ (NID) ಒದಗಿಸುವಂತೆ ಸೋಮವಾರ ಮನವಿ ಸಲ್ಲಿಸಿದ್ದಾರೆ. ಹಸೀನಾ ಅವರ ಪರ ವಕೀಲರು ರಾಜತಾಂತ್ರಿಕರಿಗೆ ಇಮೇಲ್ ಮೂಲಕ ಕಳುಹಿಸಿರುವ ಪತ್ರದಲ್ಲಿ, ಅವರಿಗೆ ಅಗತ್ಯ ದಾಖಲೆಗಳನ್ನು ಶೀಘ್ರವಾಗಿ ವಿತರಿಸಲು ಕ್ರಮ ಕೈಗೊಳ್ಳುವಂತೆ ಕೋರಿದ್ದಾರೆ.

ಪರಮಾಣು ಮಾಹಿತಿ:188 ಕೋಟಿ ಬಹುಮಾನ



ಅಮೇರಿಕ : ಇರಾನ್‌ನ ಪರಮಾಣು ಯೋಜನೆ, ಸೌಲಭ್ಯಗಳು, ಉಪಕರಣಗಳು ಮತ್ತು ವಿಜ್ಞಾನಿಗಳು ಸೇರಿದಂತೆ ಪ್ರಮುಖ ಸಿಬ್ಬಂದಿಯ ಚಲನವಲನಗಳ ಬಗ್ಗೆ ನಿಖರ ಮಾಹಿತಿ ನೀಡಿದವರಿಗೆ 20 ಮಿಲಿಯನ್ ಡಾಲರ್ (ಸುಮಾರು 188 ಕೋಟಿಗೂ ಹೆಚ್ಚು) ಬಹುಮಾನ ನೀಡುವುದಾಗಿ ಅಮೆರಿಕ ಘೋಷಿಸಿದೆ. ಅಮೆರಿಕದ ವಿದೇಶಾಂಗ ಇಲಾಖೆಯ 'ರಿವಾರ್ಡ್ಸ್ ಫಾರ್ ಜಸ್ಟಿಸ್' ಕಾರ್ಯಕ್ರಮದಡಿ ಈ ಆಫರ್ ನೀಡಲಾಗಿದ್ದು, ಮಾಹಿತಿ ನೀಡುವ ವ್ಯಕ್ತಿ ಮತ್ತು ಅವರ ಕುಟುಂಬಕ್ಕೆ ಬೇರೆಡೆ ಸುರಕ್ಷಿತವಾಗಿ ನೆಲೆಸಲು ಅವಕಾಶ ಕಲ್ಪಿಸುವುದಾಗಿ ಭರವಸೆ ನೀಡಲಾಗಿದೆ.

ಇರಾನ್‌ಗೆ 90 ಕ್ಷಿಪಣಿ ಲಾಂಚರ್ ಪೂರೈಸಲು ರಷ್ಯಾ ಒಪ್ಪಂದ



ಇರಾನ್ : ಉಕ್ರೇನ್ ವಿರುದ್ಧದ ಯುದ್ಧದ ನಡುವೆಯೂ ರಷ್ಯಾ ಮತ್ತು ಇರಾನ್ ನಡುವಿನ ಸೇನಾ ಬಾಂಧವ್ಯ ಮತ್ತಷ್ಟು ಗಟ್ಟಿಯಾಗುತ್ತಿದೆ. ಇರಾನ್‌ಗೆ 90 'APU-L' ಕ್ಷಿಪಣಿ ಲಾಂಚರ್‌ಗಳನ್ನು ಪೂರೈಸಲು ರಷ್ಯಾ ಒಪ್ಪಂದ ಮಾಡಿಕೊಂಡಿದೆ ಎಂದು ಸೋರಿಕೆಯಾದ ರಕ್ಷಣಾ ದಾಖಲೆಗಳನ್ನು ಆಧರಿಸಿ 'ಫೈನಾನ್ಷಿಯಲ್ ಟೈಮ್ಸ್' ವರದಿ ಮಾಡಿದೆ. ರಷ್ಯಾದ ಕ್ಷಿಪಣಿ ತಯಾರಿಕಾ ಸಂಸ್ಥೆ 'ವಿಂಪೆಲ್'ನ (Vympel) 2024–2025ರ ಉತ್ಪಾದನಾ ವೇಳಾಪಟ್ಟಿಯಲ್ಲಿ ಈ ರಫ್ತು ಆದೇಶದ ಉಲ್ಲೇಖವಿದೆ. ಈ ದಾಖಲೆಗಳಲ್ಲಿ ಇರಾನ್ ದೇಶಕ್ಕೆ 'ಏ–10' ಎಂಬ ಸಂಕೇತ ಹೆಸರನ್ನು ಬಳಸಲಾಗಿದೆ.

ಇಸ್ರೇಲ್‌ನಲ್ಲಿ ತೀವ್ರ ರಾಜಕೀಯ ಸಂಚಲನ



ಇಸ್ರೇಲ್ : ಇಸ್ರೇಲ್‌ನಲ್ಲಿ ಸಾರ್ವತ್ರಿಕ ಚುನಾವಣೆ ಬಳಿಕ ಸ್ಪಷ್ಟ ಬಹುಮತ ಸಿಗದೆ ಭಾರಿ ರಾಜಕೀಯ ಬಿಕ್ಕಟ್ಟು ಹಾಗೂ ಸಂಚಲನ ಸೃಷ್ಟಿಯಾಗಿದೆ. ಹಾಲಿ ಪ್ರಧಾನಿ ಬೆಂಜಮಿನ್ ನೇತನ್ಯಾಹು ನೇತೃತ್ವದ ಆಡಳಿತಾರೂಢ ಲಿಕುಡ್ ಪಕ್ಷಕ್ಕೆ ಸ್ಪಷ್ಟ ಬಹುಮತ ದೊರೆಯದ ಕಾರಣ ಅವರು ಸರ್ಕಾರ ರಚಿಸಲು ಹೆಣಗಾಡುತ್ತಿದ್ದಾರೆ. ಈ ನಡುವೆ, ಮಾಜಿ ಸೇನಾ ಮುಖ್ಯಸ್ಥ ಹಾಗೂ ಯಶಾರ್/ರಾಷ್ಟ್ರೀಯ ಐಕ್ಯತಾ ಕೂಟದ ಪ್ರಮುಖ ನಾಯಕ ಗಾಡಿ ಐಸೆನ್‌ಕೋಟ್ ಅವರಿಗೆ ಸರ್ಕಾರ ರಚನೆ ಮಾಡಲು ಇಸ್ರೇಲ್ ಅಧ್ಯಕ್ಷ ಐಸಾಕ್ ಹೆರ್ಜೋಗ್ ಅಧಿಕೃತ ಆಹ್ವಾನ ನೀಡಿದ್ದಾರೆ. ಅಧ್ಯಕ್ಷರು ಬಹುಮತ ಸಾಬೀತುಪಡಿಸಲು 28 ದಿನಗಳ ಗಡುವನ್ನು ನೀಡಿದ್ದು, ಈ ಅವಧಿಯಲ್ಲಿ ಅಗತ್ಯ ಬೆಂಬಲ ಕ್ರೋಢೀಕರಿಸುವ ಸವಾಲು ಐಸೆನ್‌ಕೋಟ್ ಮುಂದಿದೆ.

ವಿದೇಶಿ ಮಹಿಳೆಯರ ಮೇಲಿನ ಅತ್ಯಾಚಾರ : ಪಾಕ್ ಉಪ ಪ್ರಧಾನಿ ಮೊಮ್ಮಗ ದೋಷಾ




ಲಾಹೋರ್: ಪಾಕಿಸ್ತಾನದಲ್ಲಿ ನಡೆದ ಇಬ್ಬರು ವಿದೇಶಿ ಮಹಿಳೆಯರ ಮೇಲಿನ ಸಾಮೂಹಿಕ ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ, ದೇಶದ ಉಪ ಪ್ರಧಾನಿ ಹಾಗೂ ವಿದೇಶಾಂಗ ಸಚಿವ ಇಶಾಕ್ ದಾರ್ ಅವರ ಮೊಮ್ಮಗ ರಜಾ ದಾರ್ ಸೇರಿದಂತೆ ಒಟ್ಟು 8 ಜನರ ವಿರುದ್ಧ ನ್ಯಾಯಾಲಯ ಮಂಗಳವಾರ ದೋಷಾರೋಪಣೆ ದಾಖಲಿಸಿಕೊಂಡಿದೆ. ಲಾಹೋರ್‌ನ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ರಫಾಕತ್ ಅಲಿ ಗೊಂಡಲ್ ಅವರ ನೇತೃತ್ವದ ನ್ಯಾಯಾಲಯದಲ್ಲಿ ಈ ಪ್ರಕ್ರಿಯೆ ನಡೆದಿದೆ. ವಿಚಾರಣೆ ವೇಳೆ ಆರೋಪಿಗಳೆಲ್ಲರೂ ತಾವು ನಿರ್ದೋಷಿಗಳು ಎಂದು ವಾದಿಸಿದ್ದಾರೆ. ಪ್ರಕರಣದ ಔಪಚಾರಿಕ ವಿಚಾರಣೆಯನ್ನು ಆರಂಭಿಸಿರುವ ಕೋರ್ಟ್, ಡಿಸೆಂಬರ್ 9ರಂದು ಸಾಕ್ಷಿಗಳನ್ನು ಹಾಜರುಪಡಿಸುವಂತೆ ಅಭಿಯೋಜನೆಗೆ (ಪ್ರಾಸಿಕ್ಯೂಷನ್) ಸೂಚಿಸಿದೆ.

ವೀರೇಂದ್ರ ಸೆಹ್ವಾಗ್ ಪುತ್ರ ಆರ್ಯವೀರ್ ಧಮಾಕಾ



ಹೈದರಾಬಾದ್ : ಯುಎಇ ವಿರುದ್ಧದ 2026ರ ಏಷ್ಯಾಕಪ್ ಗ್ರೂಪ್ A ಪಂದ್ಯದಲ್ಲಿ ಭಾರತದ ಯುವ ಬ್ಯಾಟರ್, ವೀರೇಂದ್ರ ಸೆಹ್ವಾಗ್ ಅವರ ಪುತ್ರ ಆರ್ಯವೀರ್ ಸೆಹ್ವಾಗ್ ಭರ್ಜರಿ 160 ರನ್ (168 ಎಸೆತ) ಸಿಡಿಸಿ ಎಲ್ಲರ ಗಮನ ಸೆಳೆದಿದ್ದಾರೆ. ಅಭಿಮಾನಿಗಳು ಅವರಲ್ಲಿ ಸೆಹ್ವಾಗ್ ಅವರ ಆಕ್ರಮಣಕಾರಿ ಶೈಲಿಯನ್ನು ನಿರೀಕ್ಷಿಸುತ್ತಿರುವಾಗಲೇ, ಆರ್ಯವೀರ್ ನೀಡಿದ ಹೇಳಿಕೆಯೊಂದು ಕ್ರಿಕೆಟ್ ಅಂಗಳದಲ್ಲಿ ಸಂಚಲನ ಮೂಡಿಸಿದೆ. ಪ್ರಚಾರದ ವಿಡಿಯೋ ಒಂದರಲ್ಲಿ ಮಾತನಾಡಿದ 19 ವರ್ಷದ ಆರ್ಯವೀರ್, "ನಾನು ಸೆಹ್ವಾಗ್‌ನಂತೆ ಆಡಲು ಬಯಸಲ್ಲ, ವಿರಾಟ್ ಕೊಹ್ಲಿ ಥರ ಆಡಲು ಬಯಸುತ್ತೇನೆ" ಎಂದು ಮುಕ್ತವಾಗಿ ಹೇಳಿಕೊಂಡಿದ್ದಾರೆ.

ಶಿವಮೊಗ್ಗ ಏರ್‌ಪೋರ್ಟ್ ಕೇವಲ 'ಮ್ಯೂಸಿಯಂ': ಬಿ.ವೈ.ಆರ್




ಶಿವಮೊಗ್ಗ : ಶಿವಮೊಗ್ಗದ ಸೊಗಾನೆಯಲ್ಲಿರುವ ಏರ್‌ಪೋರ್ಟ್‌ನಿಂದ ಸ್ಟಾರ್ ಏರ್‌ಲೈನ್ಸ್ ತನ್ನ ವಿಮಾನ ಸೇವೆಯನ್ನು ಸ್ಥಗಿತಗೊಳಿಸಲು ನಿರ್ಧರಿಸಿದ್ದು, ರಾಜ್ಯ ಸರ್ಕಾರದ ನಿರ್ಲಕ್ಷ್ಯ ಹೀಗೆಯೇ ಮುಂದುವರಿದರೆ ಶಿವಮೊಗ್ಗ ಏರ್‌ಪೋರ್ಟ್ ಕೇವಲ 'ಮ್ಯೂಸಿಯಂ' ಆಗಿ ಉಳಿಯಲಿದೆ ಎಂದು ಶಿವಮೊಗ್ಗ ಸಂಸದ ಬಿ.ವೈ. ರಾಘವೇಂದ್ರ ತೀವ್ರ ಕಳವಳ ವ್ಯಕ್ತಪಡಿಸಿದ್ದಾರೆ. ಇದೇ ತಿಂಗಳ 29 ರಂದು ವಿಮಾನ ಸಂಸ್ಥೆಯು ತನ್ನ ಸೇವೆಯನ್ನು ರದ್ದುಗೊಳಿಸಲು ನಿರ್ಧರಿಸಿದೆ. ಕಳೆದ 3 ವರ್ಷಗಳಲ್ಲಿ ಶಿವಮೊಗ್ಗ ಏರ್‌ಪೋರ್ಟ್‌ನಿಂದ 4,29,000ಕ್ಕೂ ಹೆಚ್ಚು ಪ್ರಯಾಣಿಕರು ಸಂಚಾರ ನಡೆಸಿದ್ದು, ಉತ್ತಮ ಪ್ರಯಾಣಿಕ ಸಾಂದ್ರತೆ ಇದ್ದರೂ ವಿಮಾನ ಸೇವೆ ಸ್ಥಗಿತಗೊಳ್ಳುತ್ತಿರುವುದು ಬೇಸರದ ಸಂಗತಿ ಎಂದರು.

ಆರು ತಿಂಗಳಲ್ಲಿ ವೈ.ಜಿ.ಗುಡ್ಡ ಏತ ನೀರಾವರಿ ಯೋಜನೆ ಪೂರ್ಣ: ಎಚ್.ಸಿ.



ಮಾಗಡಿ : ಮಾಗಡಿ ತಾಲ್ಲೂಕಿನ ವೈ.ಜಿ.ಗುಡ್ಡ ಜಲಾಶಯದಲ್ಲಿ ನಡೆಯುತ್ತಿರುವ ಏತ ನೀರಾವರಿ ಯೋಜನೆಯ ಕಾಮಗಾರಿಗಳು ಭರದಿಂದ ಸಾಗುತ್ತಿದ್ದು, ಮುಂದಿನ 6 ರಿಂದ 8 ತಿಂಗಳ ಅವಧಿಯಲ್ಲಿ ಮುಕ್ತಾಯಗೊಂಡು ಲೋಕಾರ್ಪಣೆಯಾಗಲಿದೆ ಎಂದು ಸಚಿವ ಎಚ್.ಸಿ. ಬಾಲಕೃಷ್ಣ ತಿಳಿಸಿದ್ದಾರೆ. ಜಲಾಶಯದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಅವರು, ಯೋಜನೆ ಪೂರ್ಣಗೊಂಡ ಬಳಿಕ ಸಾತನೂರು, ಸೀಗೇಕುಪ್ಪೆ ಹಾಗೂ ಅಗಲಕೋಟೆ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗುವುದು ಎಂದರು. ಈ ಯೋಜನೆಯಡಿ 18ಕ್ಕೂ ಹೆಚ್ಚು ಕೆರೆಗಳಿಗೆ ನೀರು ತುಂಬಿಸುವ ಹಾಗೂ ಹೇಮಾವತಿ, ಎತ್ತಿನಹೊಳೆ ಯೋಜನೆಗಳಿಗೆ ಸಂಬಂಧಿಸಿದಂತೆ ವರದಿ ಪ್ರಕಟವಾಗಿತ್ತು.

ಉಚಿತ ಯೋಜನೆಗಳಿಂದ ಬೆಲೆ ಏರಿಕೆ ಖಚಿತ:ಹೈಕೋರ್ಟ್ ಅಸಮಾಧಾನ



ಬೆಂಗಳೂರು : ರಾಜ್ಯ ಸರಕಾರ ಉಚಿತ ಯೋಜನೆಗಳಿಂದಾಗಿ ಅಗತ್ಯ ವಸ್ತುಗಳ ಬೆಲೆ ಹೆಚ್ಚಾಗುತ್ತಿರುವುದಕ್ಕೆ ಕರ್ನಾಟಕ ಉಚ್ಚ ನ್ಯಾಯಾಲಯ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ. "ದಿನ ನಿತ್ಯದ ವಸ್ತುಗಳ ಬೆಲೆಯನ್ನು ಹೀಗೆ ಏರಿಸುತ್ತಾ ಹೋ ದರೆ ಸಾಮಾನ್ಯ ಜನರು ಜೀವನ ಸಾಗಿಸು ವುದಾದರೂ ಹೇಗೆ?" ಎಂದು ನ್ಯಾಯಪೀಠ ಪ್ರಶ್ನಿಸಿದೆ. ಮೈಸೂರಿನ ಉಗ್ರಾಣವೊಂದರಲ್ಲಿ ಅಕ್ಕಿ ಮತ್ತು ಗೋಧಿ ಕೊರತೆಗೆ ಸಂಬಂಧಿಸಿದ ಕ್ರಿಮಿನಲ್ ಪ್ರಕರಣ ರದ್ದು ಕೋರಿ ಸಲ್ಲಿಕೆಯಾ ಗಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ವಿ.ಶ್ರೀಶಾನಂದ ಅವರಿದ್ದ ಪೀಠವು ಈ ಖಾರವಾದ ಮಾತುಗಳನ್ನು ಹೇಳಿದೆ.

ಚಿಕ್ಕೋಡಿಯಿಂದ 3,000ಕ್ಕೂ ಹೆಚ್ಚು ಶಾಲಾ ನೌಕರರು ಪ್ರತಿಭಟನೆಯಲ್ಲಿ ಭಾಗಿ



ಚಿಕ್ಕೋಡಿ : ಖಾಸಗಿ ಶಾಲಾ ನೌಕರರ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ನವೆಂಬರ್ 17 ಮತ್ತು 18ರಂದು ಧಾರವಾಡದಲ್ಲಿ ಹಮ್ಮಿಕೊಳ್ಳಲು ಉದ್ದೇಶಿಸಿರುವ ಬೃಹತ್ ಪ್ರತಿಭಟನೆಯಲ್ಲಿ ಚಿಕ್ಕೋಡಿ ಶೈಕ್ಷಣಿಕ ಜಿಲ್ಲೆಯ ವಿವಿಧ ತಾಲ್ಲೂಕುಗಳಿಂದ 3,000ಕ್ಕೂ ಹೆಚ್ಚು ನೌಕರರು ಭಾಗವಹಿಸಲಿದ್ದಾರೆ. ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ರಾಜ್ಯ ಘಟಕ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳ ಆಡಳಿತ ಮಂಡಳಿಗಳ ಮತ್ತು ನೌಕರರ ಹೋರಾಟ ಸಮನ್ವಯ ಸಮಿತಿ ಹುಬ್ಬಳ್ಳಿ ಸಹಯೋಗದಲ್ಲಿ ನಡೆಯಲಿರುವ ಪ್ರತಿಭಟನೆ ಹಿನ್ನೆಲೆಯಲ್ಲಿ ಖಾಸಗಿ ಶಾಲೆಗಳ ನೌಕರರ ಸಭೆಯನ್ನು ಕರೆಯಲಾಗಿತ್ತು.

ಸಿದ್ದರಾಮಯ್ಯ ಹಾಗೂ ನನ್ನ ನಡುವೆ ಯಾವುದೇ ಮುನಿಸಿಲ್ಲ: ಡಿ.ಕೆ.ಶಿ



ಬೆಂಗಳೂರು: ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ತಮ್ಮ ನಡುವೆ ಯಾವುದೇ ರೀತಿಯ ಮನಸ್ತಾಪ ಅಥವಾ ಮುನಿಸು ಇಲ್ಲ ಎಂದು ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ. ರಾಜಧಾನಿಯ ಮೇಖ್ರಿ ವೃತ್ತ ಹಾಗೂ ಟೌನ್ ಹಾಲ್ ಬಳಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಲವರು ಅನಗತ್ಯವಾಗಿ ತಮ್ಮಿಬ್ಬರ ನಡುವೆ ಭಿನ್ನಾಭಿಪ್ರಾಯವಿದೆ ಎಂಬ ವಾತಾವರಣ ಸೃಷ್ಟಿಸಲು ಸಂಚು ರೂಪಿಸುತ್ತಿದ್ದಾರೆ ಎಂದು ತಿರುಗೇಟು ನೀಡಿದರು. ರಾಜಕಾರಣದಲ್ಲಿ ವಿರೋಧಿಗಳು ಹಾಗೂ ನಿಂದಕರು ಇದ್ದಾಗ ಮಾತ್ರ ಶುದ್ಧ ರಾಜಕೀಯ ಮಾಡಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಎಸ್‌ಸಿ–ಎಸ್‌ಟಿ ಮೀಸಲಾತಿ ರದ್ದು: ರಾಜ್ಯ ಸರ್ಕಾರದಿಂದ ಮೇಲ್ಮನವಿ



ಬೆಂಗಳೂರು: ಪರಿಶಿಷ್ಟ ಜಾತಿಗಳ (ಎಸ್‌ಸಿ) ಮೀಸಲಾತಿಯನ್ನು ಶೇ. 15 ರಿಂದ 17 ಕ್ಕೆ ಹಾಗೂ ಪರಿಶಿಷ್ಟ ಪಂಗಡಗಳ (ಎಸ್‌ಟಿ) ಮೀಸಲಾತಿಯನ್ನು ಶೇ. 3 ರಿಂದ 7 ಕ್ಕೆ ಹೆಚ್ಚಿಸಿದ್ದ ರಾಜ್ಯ ಸರ್ಕಾರದ ನಿರ್ಧಾರವನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್‌ನ ತೀರ್ಪಿನ ವಿರುದ್ಧ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ವಿಶೇಷ ಅನುಮತಿ ಅರ್ಜಿ (ಎಸ್‌ಎಲ್‌ಪಿ) ಸಲ್ಲಿಸಿದೆ. ತೀರ್ಪು ಬಂದ ಹದಿನಾರು ದಿನಗಳ ಒಳಗಾಗಿ, ಅಂದರೆ 2026ರ ಅಕ್ಟೋಬರ್ 15ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರದಂತೆ ಅಕ್ಟೋಬರ್ 28ರಂದು ಈ ಮೇಲ್ಮನವಿಯನ್ನು ಸಲ್ಲಿಸಲಾಗಿದೆ.

ಗ್ರಂಥಾಲಯ ಪುಸ್ತಕ ಖರೀದಿ ಹಗರಣ: ಎಫ್‌ಐಆರ್‌ಗೆ ಹೈಕೋರ್ಟ್ ಆದೇಶ



ಚೆನ್ನೈ : ತಮಿಳುನಾಡಿನ ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕ ಖರೀದಿಸುವ ಪ್ರಕ್ರಿಯೆಯಲ್ಲಿ ನಡೆದಿರುವ ಬೃಹತ್ ಭ್ರಷ್ಟಾಚಾರ ಹಾಗೂ ಅಕ್ರಮಗಳ ಕುರಿತು ತಕ್ಷಣವೇ ಎಫ್‌ಐಆರ್ ದಾಖಲಿಸುವಂತೆ ಮದ್ರಾಸ್ ಹೈಕೋರ್ಟ್‌ನ ಮಧುರೈ ಪೀಠ ಜಾಗೃತ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯಕ್ಕೆ (ಡಿವಿಎಸಿ) ಆದೇಶ ನೀಡಿದೆ. ಸಾರ್ವಜನಿಕ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಪಾರದರ್ಶಕವಾಗಿ ಖರೀದಿಸುವಂತೆ ಹೈಕೋರ್ಟ್ ನೀಡಿದ್ದ ಸ್ಪಷ್ಟ ನಿರ್ದೇಶನಗಳನ್ನು ಉಲ್ಲಂಘಿಸಲಾಗಿದೆ ಎಂದು ಆರೋಪಿಸಿ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದರು. ಇದರ ವಿಚಾರಣೆ ನಡೆಸಿದ ವಿಭಾಗೀಯ ಪೀಠವು ಈ ಮಹತ್ವದ ನಿರ್ದೇಶನ ಹೊರಡಿಸಿದೆ.

ಢಾಕಾದ ಕೊಳಚೆ ಪ್ರದೇಶ ತೋರಿಸಿ ಚೀನಾ ಕುಕೃತ್ಯ!



ನವದೆಹಲಿ : ಬಾಂಗ್ಲಾದೇಶದ ಮಣ್ಣಿನಲ್ಲಿ ನಿಂತು ಚೀನಾ ಪ್ರಜೆಗಳು ಭಾರತದ ವಿರುದ್ಧ ನಡೆಸುತ್ತಿರುವ ವ್ಯವಸ್ಥಿತ ಅಪಪ್ರಚಾರ ಹಾಗೂ ಕುತಂತ್ರದ ವಿರುದ್ಧ ಭಾರತ ಸರ್ಕಾರ ತೀವ್ರ ಕಠಿಣ ನಿಲುವು ತಳೆದಿದೆ. ಬಾಂಗ್ಲಾದೇಶದ ರಾಜಧಾನಿ ಢಾಕಾದ ಅತ್ಯಂತ ಬಡ ಮತ್ತು ಕೊಳಚೆ ಪ್ರದೇಶಗಳ ವಿಡಿಯೋಗಳನ್ನು ಚಿತ್ರೀಕರಿಸಿ, ಅವುಗಳನ್ನು 'ಭಾರತದ ನವದೆಹ ಲಿ' ಎಂದು ಜಗತ್ತಿಗೆ ಸುಳ್ಳು ಬಿಂಬಿಸುತ್ತಿರುವ ಚೀನಾ ಪ್ರಜೆಗಳ ಕೃತ್ಯಕ್ಕೆ ಭಾರತೀಯ ವಿದೇಶಾಂಗ ಸಚಿವಾಲಯ (MEA) ತೀವ್ರ ಆಕ್ರೋಶ ಹೊರಹಾಕಿದೆ. ಬಾಂಗ್ಲಾದೇಶದ 'ಪ್ರಥೋಮ್ ಅಲೋ' ಪತ್ರಿಕೆಯ ರಹಸ್ಯ ತನಿಖೆಯಲ್ಲಿ ಈ ಆಘಾತಕಾರಿ ಸಂಗತಿ ಬಹಿರಂಗವಾಗಿದೆ.

ವಂದೇ ಮಾತರಂ ವಿವಾದ: ಕೇರಳ ಸರ್ಕಾರದ ವಿರುದ್ಧ ಬಿಜೆಪಿ ಆಕ್ರೋಶ



ಕೇರಳಮ್ : ಕೇರಳದಲ್ಲಿ 'ವಂದೇ ಮಾತರಂ' ಗೀತೆಯ ಗಾಯನಕ್ಕೆ ಸಂಬಂಧಿಸಿದ ವಿವಾದ ಮುಂದುವರಿದಿದ್ದು, ಯುಡಿಎಫ್ (UDF) ಸರ್ಕಾರದ ವಿರುದ್ಧ ಬಿಜೆಪಿ ಶಿಷ್ಟಾಚಾರ ಉಲ್ಲಂಘನೆಯ ಗಂಭೀರ ಆರೋಪಗಳನ್ನು ಮಾಡಿದೆ. ಕಾಸರಗೋಡಿನ ಮುಳ್ಳೇರಿಯಾದಲ್ಲಿರುವ ಕುಟುಂಬ ಆರೋಗ್ಯ ಕೇಂದ್ರದಲ್ಲಿ ಆಯೋಜಿಸಲಾಗಿದ್ದ ಪ್ರಯೋಗಾಲಯ ಉದ್ಘಾಟನಾ ಕಾರ್ಯಕ್ರಮದಲ್ಲಿ, ಅಧಿಕೃತ ನಿಲುವಿಗೆ ವಿರುದ್ಧವಾಗಿ 'ವಂದೇ ಮಾತರಂ'ನ ಎಲ್ಲಾ ಪದ್ಯಗಳನ್ನು ಹಾಡಲಾಯಿತು. ಇದರಿಂದ ಅಸಮಾಧಾನಗೊಂಡ ಸಚಿವ ಕೆ. ಮುರಳೀಧರನ್, ಸಂಸದ ರಾಜ್ ಮೋಹನ್ ಉನ್ನಿತಾನ್, ಶಾಸಕ ಕಲ್ಲಾತ್ರಾ ಮಹಿನ್ ಹಾಗೂ ಜಿಲ್ಲಾಧಿಕಾರಿ ಶ್ರೀಧನ್ಯ ಸುರೇಶ್ ಗೀತೆ ಮುಗಿಯುವ ಮೊದಲೇ ತಮ್ಮ ಆಸನಗಳಿಗೆ ಮರಳಿದರು.

ಅಶುತೋಷ್ ರಾಂಕಾ ಪ್ರೊಫೈಲ್ ಬಹಿರಂಗ !



ನವದೆಹಲಿ : ಕಾಕ್ರೋಚ್ ಜನತಾ ಪಕ್ಷದ ಪ್ರಮುಖ ವಕ್ತಾರ ಮತ್ತು ನೀತಿ ಸಲಹೆಗಾರ ಅಶುತೋಷ್ ರಾಂಕಾ ಅವರ ವೃತ್ತಿಪರ ಹಿನ್ನೆಲೆ ಇದೀಗ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಅಂತರರಾಷ್ಟ್ರೀಯ ಲಸಿಕಾ ಒಕ್ಕೂಟ ಸಂಸ್ಥೆಯಾದ 'ಗವಿ'ಯಲ್ಲಿ ರಾಂಕಾ ಅರೆಕಾಲಿಕ ಸಲಹೆಗಾರರಾಗಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ, ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಸರ್ಕಾರದಲ್ಲಿ ಸಚಿವೆಯಾಗಿದ್ದ ಡಾ. ಸಾನಿಯಾ ನಿಶ್ತಾರ್ ಅವರು ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದರು ಎಂಬ ಅಂಶ ಬಯಲಾಗಿದೆ. ಜಾಗತಿಕ ಸಂಸ್ಥೆಗಳಲ್ಲಿ ಅನುಭವ ಹೊಂದಿರುವ ರಾಂಕಾ, 2024 ರಿಂದ 2025ರ ಅವಧಿಯಲ್ಲಿ 'ಗವಿ' ಸಂಸ್ಥೆಯಲ್ಲಿ ಕೆಲಸ ಮಾಡಿದ್ದಾರೆ.

ಭಾರತದ ರಕ್ಷಣಾ ಸಹಕಾರ ಹಾಗೂ ಜಾಗತಿಕ ವ್ಯಾಪಾರಕ್ಕೆ ಬಲ



ನವದೆಹಲಿ : ಜಾಗತಿಕ ರಾಜಕೀಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಿಕೊಳ್ಳಲು ಭಾರತ ಹಲವು ಹಂತಗಳಲ್ಲಿ ಮಹತ್ವದ ಕಾರ್ಯತಂತ್ರ ರೂಪಿಸುತ್ತಿದೆ. ಒಂದು ಕಡೆ ಚೀನಾದ ಪ್ರಭಾವವಿರುವ ದಕ್ಷಿಣ ಏಷ್ಯಾ ಮತ್ತು ಇಂಡೋ–ಪೆಸಿಫಿಕ್ ವಲಯದಲ್ಲಿ ಪ್ರಮುಖ ರಾಷ್ಟ್ರಗಳ ಜೊತೆ ಭದ್ರತಾ ಸಹಕಾರವನ್ನು ಬಲಪಡಿಸುತ್ತಿದ್ದರೆ, ಮತ್ತೊಂದೆಡೆ ಅಂತಾರಾಷ್ಟ್ರೀಯ ವೇದಿಕೆಗಳಲ್ಲಿ ಆರ್ಥಿಕ ಸಹಕಾರ ಮತ್ತು ವ್ಯಾಪಾರ ಸಂಬಂಧಗಳಿಗೆ ಒತ್ತು ನೀಡುತ್ತಿದೆ. ಇತ್ತೀಚಿನ ಬೆಳವಣಿಗೆಗಳಲ್ಲಿ ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೋವಲ್ ಅವರ ವಿಯೆಟ್ನಾಂ ಭೇಟಿ ಮತ್ತು ವಿದೇಶಾಂಗ ಸಚಿವ ಎಸ್. ಜೈಶಂಕರ್ ಅವರ ಕಾಮನ್‌ವೆಲ್ತ್ ಸಭೆಯಲ್ಲಿನ ಭಾಗವಹಿಸುವಿಕೆ ಪ್ರಮುಖ ಗಮನ ಸೆಳೆದಿದೆ.



ಕರಾವಳಿ ತರಂಗಿಣಿ

ಕಲಾ ತರಂಗಿಣಿ



ಆದಿತ್ಯ ಶಶಿಕುಮಾರ್ ಅಭಿನಯದ 'ರಾಶಿ' ಚಿತ್ರಕ್ಕೆ 'ತಾರಾ'ಬಲ

ಆದಿತ್ಯ ಶಶಿಕುಮಾರ್ ನಾಯಕನಾಗಿ ಅಭಿನಯಿಸಿರುವ 'ರಾಶಿ' ಚಿತ್ರದ ಟ್ರೇಲರ್ ಇತ್ತೀಚೆಗೆ ಅದ್ದೂರಿಯಾಗಿ ಬಿಡುಗಡೆಯಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಹಿರಿಯನಟ ಶಶಿಕುಮಾರ್ ಹಾಗೂ ಹಿರಿಯ ನಟಿ ತಾರಾ ಅನುರಾಧಾ ಅವರು ಚಿತ್ರದ ಟ್ರೇಲರ್ ಅನಾವರಣಗೊಳಿಸಿ ಚಿತ್ರತಂಡಕ್ಕೆ ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಡಿ ಬೀಟ್ಸ್‌ನ ಶೈಲಜಾ ನಾಗ್ ಉಪಸ್ಥಿತರಿದ್ದರು. ಟ್ರೇಲರ್ ಬಿಡುಗಡೆ ಮಾಡಿದ ಗಣ್ಯರು ಚಿತ್ರ ಯಶಸ್ವಿಯಾಗಲೆಂದು ಹಾರೈಸಿದರು. ನಿರ್ಮಾಪಕ ಅಖಿಲೇಶ್ ನಿರ್ಮಾಣದ ಈ ಚಿತ್ರಕ್ಕೆ ವಿಜಯ್ ಪಾಳೇಗಾರ್ ನಿರ್ದೇಶನದ ಜೊತೆಗೆ ಸಂಗೀತ ನಿರ್ದೇಶನವನ್ನೂ ನಿರ್ವಹಿಸಿದ್ದಾರೆ. ಡಿ ಬೀಟ್ಸ್ ಸಂಸ್ಥೆ ಮೂಲಕ ಬಿಡುಗಡೆಯಾಗಿರುವ ಈ ಚಿತ್ರದ ಹಾಡುಗಳು ಈಗಾಗಲೇ ಬಿಡುಗಡೆಯಾಗಿ ಜನಮನ ಸೂರೆಗೊಂಡು ಸಂಗೀತಪ್ರಿಯರ ಮೆಚ್ಚುಗೆಗೆ ಪಾತ್ರವಾಗಿವೆ. ತಾಯಿ–ಮಗನ ನಡುವಿನ ಬಾಂಧವ್ಯ, ಪ್ರೀತಿ ಹಾಗೂ ಕೌಟುಂಬಿಕ ಸಂಬಂಧಗಳ ಸುತ್ತ ಕಥೆ ಸಾಗುತ್ತದೆ. ನಾಯಕ ಆದಿತ್ಯ ಶಶಿಕುಮಾರ್ ಶಿವು ಎಂಬ ಮುಗ್ಧ ಹಳ್ಳಿಯ ಯುವಕನ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ನಾಯಕಿ ಸಮೀಕ್ಷಾ ರಾಧ್ಯಾ ಎಂಬ ಕಾಲೇಜು ಹುಡುಗಿಯ ಪಾತ್ರ ನಿರ್ವಹಿಸಿದ್ದಾರೆ.



ನಿರ್ಮಾಪಕ ಅಖಿಲೇಶ್ ಮಾತನಾಡಿ, ತಾವು ಸಿನಿಮಾ ಪ್ರೀತಿಯಿಂದ ಚಿತ್ರ ನಿರ್ಮಾಣಕ್ಕೆ ಬಂದಿದ್ದು, ಚಿತ್ರತಂಡದ ಪ್ರತಿಯೊಬ್ಬರೂ ಶ್ರದ್ಧೆಯಿಂದ ಕೆಲಸ ಮಾಡಿದ್ದಾರೆ. ಈ ಪ್ರಯಾಣದಲ್ಲಿನಟ ಶಶಿಕುಮಾರ್ ಅವರು ಬೆನ್ನೆಲುಬಾಗಿ ನಿಂತು, ಪ್ರತಿ ಹಂತದಲ್ಲೂ ಧೈರ್ಯ, ಪ್ರೋತ್ಸಾಹ, ಮಾರ್ಗದರ್ಶನ ನೀಡಿದ್ದಾರೆ. ಅವರ ಬೆಂಬಲವನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ಜೊತೆಗೆ ಶೈಲಜಾನಾಗ್ ಅವರ ಸಲಹೆ ಮತ್ತು ಮಾರ್ಗದರ್ಶನವೂ ಬಹಳ ಸಹಕಾರಿಯಾಗಿದೆ. ತಾರಾ ಅನುರಾಧಾ ಅವರಿಗೆ ವಿಶೇಷ ಧನ್ಯವಾ ದಗಳನ್ನು ತಿಳಿಸಿದರು. ನಿರ್ದೇಶಕ ಹಾಗೂ ಸಂಗೀತ ನಿರ್ದೇಶಕ ವಿಜಯ್ ಪಾಳೇಗಾರ್ ಮಾತನಾಡಿ, ಕಾಲೇಜು ದಿನಗಳಿಂದಲೂ ನಿರ್ದೇಶಕನಾಗಬೇಕೆಂಬ ಕನಸು ಹೊಂದಿದ್ದೆ ಎಂದರು.

'ಲಂಬೋದರ 2.0' ವಿತರಣಾ ಹಕ್ಕುಗಳನ್ನು ಪಡೆದುಕೊಂಡ ಪಿವಿಆರ್ ಐನಾಕ್ಸ್ ಪಿಕ್ಚರ್ಸ್

ಸಿಂಪಲ್ ಸುನಿ ನಿರ್ದೇಶನದ, ಬಹುನಿರೀಕ್ಷಿತ ಕನ್ನಡ ಮತ್ತು ಹಿಂದಿ ಭಾಷೆಗಳ ವೈಜ್ಞಾನಿಕ ಕಾಲ್ಪನಿಕ ಸಾಮಾಜಿಕ ಥ್ರಿಲ್ಲರ್ ಚಿತ್ರ 'ಲಂಬೋದರ2.0' ಚಿತ್ರದ ವಿತರಣಾ ಹಕ್ಕುಗಳನ್ನು ಪ್ರತಿಷ್ಠಿತ 'ಪಿವಿಆರ್ ಐನಾಕ್ಸ್ ಪಿಕ್ಚರ್ಸ್' ಸಂಸ್ಥೆ ಪಡೆದುಕೊಂಡಿದೆ. ಮಹಾವೀರ್ ಜೈನ್ ಫಿಲ್ಮ್ಸ್ ಪ್ರಸ್ತುತಪಡಿಸುತ್ತಿರುವ ಹಾಗೂ 'ಮಾಸ್ ಪ್ರೊಡಕ್ಷನ್' ಬ್ಯಾನರ್ ಅಡಿಯಲ್ಲಿ ನಿರ್ಮಾಣವಾಗಿರುವ ಈ ಚಿತ್ರವು ನವೆಂಬರ್ 13ರಂದು ಚಿತ್ರಮಂದಿರಗಳಲ್ಲಿ ಅದ್ದೂರಿಯಾಗಿ ಬಿಡುಗಡೆಯಾಗಲಿದೆ. ಖ್ಯಾತ ನಿರ್ದೇಶಕ ಸಿಂಪಲ್ ಸುನಿ ಅವರ ನಿರ್ದೇಶನದಲ್ಲಿ ಮೂಡಿಬಂದಿರುವ ಈ ಚಿತ್ರದಲ್ಲಿ ಅನಿಲ್ ಶೆಟ್ಟಿ, ಬಾಲಿವುಡ್ ನಟ ಕುನಾಲ್ ಕಪೂರ್ ಹಾಗೂ ಸಾಚಿ ಬಿಂದ್ರಾ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ವಿಶೇಷವೆಂದರೆ, ಈ ಚಿತ್ರದ ಮೂಲಕ ನಟ ಕುನಾಲ್ ಕಪೂರ್ ಕನ್ನಡ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡುತ್ತಿದ್ದಾರೆ. ಕೃತಕ ಬುದ್ಧಿಮತ್ತೆ (AI), ಅಲ್ಗಾರಿದಮ್‌ಗಳು ಹಾಗೂ ಡಿಜಿಟಲ್ ತಂತ್ರಜ್ಞಾನ ಮಾನವನ ಬದುಕಿನ ಮೇಲೆ ದಿನದಿಂದ ದಿನಕ್ಕೆ ಗಾಢ ಪ್ರಭಾವ ಬೀರುತ್ತಿರುವ ಇಂದಿನ ಜಗತ್ತಿನಲ್ಲಿ, ಮನುಷ್ಯನ ಸಂತೋಷದ ಹುಡುಕಾಟ, ಭಾವನೆಗಳ ಮೇಲಾಗುವ ತಂತ್ರಜ್ಞಾನದ ಪರಿಣಾಮ ಹಾಗೂ ಸ್ವತಂತ್ರವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ಮಾನವನ ಸ್ವಾತಂತ್ರ್ಯದಂತಹ ಗಂಭೀರ ವಿಷಯಗಳನ್ನು 'ಲಂಬೋದರ 2.0'ಚಿತ್ರವು ಒಳಗೊಂಡಿದೆ. ಈ ಚಿತ್ರದ ಪ್ರಮುಖ ಆಕರ್ಷಣೆಯೆಂದರೆ ನೈಜ ಹ್ಯೂಮನಾಯ್ಡ್ ರೋಬೋಟ್ 'JIA' ಒಂದು ಪಾತ್ರವಾಗಿ ನಟಿಸಿರುವುದು. ವೈಜ್ಞಾನಿಕ ಕಲ್ಪನೆಯ ಕಥೆಯೊಂದಿಗೆ ಹಾಸ್ಯ, ಪ್ರೇಮ, ಸಸ್ಪೆನ್ಸ್, ಕೌಟುಂಬಿಕ ಭಾವನೆಗಳು ಹಾಗೂ ಚಿಂತನೆಗೆ ಹಚ್ಚುವ ಸಾಮಾಜಿಕ ಸಂದೇಶವನ್ನು ಬೆರೆಸಿರುವ 'ಲಂಬೋದರ 2.0', ಎಲ್ಲ ವಯೋಮಾನದ ಪ್ರೇಕ್ಷಕರಿಗೂ ವಿಶಿಷ್ಟ ಸಿನಿಮಾ ಅನುಭವವನ್ನು ನೀಡುವ ನಿರೀಕ್ಷೆಯಿದೆ. ಭಾರತದ ಪ್ರಮುಖ ಸಿನಿಮಾ ವಿತರಣಾ ಸಂಸ್ಥೆಗಳಲ್ಲಿ ಒಂದಾದ ಪಿವಿಆರ್ ಐನಾಕ್ಸ್ ಪಿಕ್ಚರ್ಸ್ ಈ ಚಿತ್ರದ ವಿತರಣಾ ಹಕ್ಕುಗಳನ್ನು ಪಡೆದುಕೊಂಡಿರುವುದು ಚಿತ್ರತಂಡಕ್ಕೆ ದೊರೆತ ಪ್ರಮುಖ ಮೈಲಿಗಲ್ಲಾಗಿದೆ. ಸಂಸ್ಥೆಯ ಸುದೀರ್ಘ ಅನುಭವ ಮತ್ತು ವಿತರಣಾ ಜಾಲವು ಈ ಮಹತ್ವಾಕಾಂಕ್ಷೆಯ ಚಿತ್ರವನ್ನು ಪ್ರೇಕ್ಷಕರಿಗೆ ವ್ಯಾಪಕವಾಗಿ ತಲುಪಿಸಲು ಮತ್ತಷ್ಟು ಬಲ ತುಂಬಲಿದೆ.



ಶ್ರೀನಿವಾಸ್ ಜಯರಾಮ್ ನಿರ್ದೇಶನದ 'ಪತ್ತೇದಾರಿ'ಗೆ ನವೀನ್ ಶಂಕರ್ ಚಾಲನೆ

ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಪತ್ತೇದಾರಿ' ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು. ನಟ ನವೀನ್ ಶಂಕರ್ ಅವರು ಚಿತ್ರದ ಪ್ರಥಮ ಸನ್ನಿವೇಶಕ್ಕೆ ಆರಂಭ ಫಲಕ ತೋರುವ ಮೂಲಕ ಚಿತ್ರಕ್ಕೆ ಚಾಲನೆ ನೀಡಿದರು. ನಂತರ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿದರು. ನಿರ್ದೇಶಕ ಶ್ರೀನಿವಾಸ್ ಜಯರಾಮ್ ಮಾತನಾಡಿ, ಈಗಾಗಲೇ ಸಾಕಷ್ಟು ಕ್ರೈಂ ಥ್ರಿಲ್ಲರ್ ಸಿನಿಮಾಗಳು ಬಂದಿರುವುದರಿಂದ ನಮ್ಮ ಚಿತ್ರದಲ್ಲಿ ವಿಭಿನ್ನವಾದ ನಿರೂಪಣೆ ಇರಬೇಕೆಂಬ ಉದ್ದೇಶದಿಂದ ಸುಮಾರು ಆರು ವರ್ಷಗಳ ಕಾಲ ಸಂಶೋಧನೆ ನಡೆಸಿ ಕಥೆ ಹಾಗೂ ಚಿತ್ರಕಥೆಯನ್ನು ಸಿದ್ಧಪಡಿಸಿದ್ದೇವೆ. ಹೊಸ ರೀತಿಯ ಪ್ರಯೋಗದೊಂದಿಗೆ ಪ್ರೇಕ್ಷಕರಿಗೆ ಕುತೂಹಲ ಮೂಡಿಸುವ ಪ್ರಯತ್ನ ಮಾಡಿದ್ದೇವೆ. ಅನುಭವಿ ತಂತ್ರಜ್ಞರು ಹಾಗೂ ಕಲಾವಿದರ ಸಹಕಾರದೊಂದಿಗೆ ಚಿತ್ರದ ಪ್ರತಿಯೊಂದು ವಿಭಾಗದಲ್ಲೂ ಗುಣಮಟ್ಟಕ್ಕೆ ಆದ್ಯತೆ ನೀಡಿ ಕೆಲಸ ಮಾಡಿದ್ದೇವೆ. ಉತ್ತಮ ಸಿನಿಮಾ ನೀಡುವ ವಿಶ್ವಾಸವಿದೆ ಎಂದರು.



ಚಿತ್ರದ ನಾಯಕ ಮೊಹಮ್ಮದ್ ಕಿಜಾರ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆ ತುಂಬಾ ಚೆನ್ನಾಗಿದೆ. ನನ್ನ ಪಾತ್ರವೂ ವಿಭಿನ್ನವಾಗಿದ್ದು, ಚಿತ್ರತಂಡದ ಎಲ್ಲಾ ಸದಸ್ಯರ ಸಹಕಾರದಿಂದ ಒಳ್ಳೆಯ ಸಿನಿಮಾ ಮೂಡಿಬರುವ ನಿರೀಕ್ಷೆಯಿದೆ. ನಾಯಕನಾಗಿ ಅಭಿನಯಿಸುವುದರ ಜೊತೆಗೆ ನಿರ್ಮಾಪಕನಾಗಿಯೂ ಕಾರ್ಯನಿರ್ವಹಿಸುತ್ತಿದ್ದೇನೆ. ನಿಮ್ಮೆಲ್ಲರ ಪ್ರೋತ್ಸಾಹ ಮತ್ತು ಬೆಂಬಲ ಇರಲಿ ಎಂದು ಮನವಿ ಮಾಡಿದರು. ನಟ ತುಕಾಲಿ ಸಂತೋಷ್ ಮಾತನಾಡಿ, ಮಲಯಾಳಂ, ತೆಲುಗು, ಕನ್ನಡ ಹಾಗೂ ಹಿಂದಿ ಸಿನಿಮಾಗಳು ಮತ್ತು ವೆಬ್‌ಸೀರಿಸ್‌ಗಳನ್ನು ನೋಡುತ್ತಿರುತ್ತೇನೆ ಎಂದರು.

ರಿಸ್ಕ್ ನಡುವೆ ಮಧುಚಂದ್ರ ಮುಗಿಸಿದ ದುಷ್ಯಂತ್ !

ಸಾಮಾನ್ಯವಾಗಿ ಎಲ್ಲಾದರೂ ಪ್ರತಿಭಟನೆ ಅಂದರೆ ಅದರಿಂದ ಅಂತರ ಕಾಯುವವರೇ ಹೆಚ್ಚು. ಆದರೆ ಪ್ರತಿಭಟನೆ ನಡೆಯುತ್ತಿರುವ ದೇಶಕ್ಕೆ ಅದೇ ಸಮಯದಲ್ಲೇ ಪ್ರವಾಸಕ್ಕೆ



ಹೋದರೆ ಪರಿಸ್ಥಿತಿ ಹೇಗಿರಬಹುದು? ಅಂಥ ಅನುಭವ ಆಗಿರುವುದು ಕನ್ನಡದ ಯುವ ನಟ ದುಷ್ಯಂತ್ ಅವರಿಗೆ. ಅದು ಕೂಡ ಹನಿಮೂನ್‌ಗೆಂದು ಪ್ಯಾರಿಸ್‌ಗೆ ಹೋದ ಸಂದರ್ಭ ಇಂಥ ಘಟನೆ ನಡೆದಿದೆ. ಗತವೈಭವ ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪ್ರವೇಶ ಮಾಡಿದವರು ದುಷ್ಯಂತ್. ಸಿಂಪಲ್ ಸುನಿ ನಿರ್ದೇಶನದ ಚಿತ್ರದಲ್ಲಿ ನಾಯಕನಾಗಿ ನಾಲ್ಕು ಗೆಟಪ್‌ಗಳಲ್ಲಿ ಕಾಣಿಸಿಕೊಂಡು ಅಚ್ಚರಿಯ ಅಭಿನಯ ನೀಡಿದ್ದರು. ವಿಮರ್ಶಕರ ಮೆಚ್ಚುಗೆ, ಪ್ರಶಸ್ತಿ ಪಡೆದ ದುಷ್ಯಂತ್ ಅಭಿನಯಕ್ಕೆ ಒಟಿಟಿ ಮೂಲಕ ಇಂದಿಗೂ ಪ್ರಶಂಸೆ ಪಡೆಯುತ್ತಲೇ ಇದ್ದಾರೆ. ಎರಡನೇ ಸಿನೆಮಾಗೂ ಮೊದಲು ಏಳು ಹೆಜ್ಜೆ ಇಟ್ಟು ಬರಲು ತೀರ್ಮಾನಿಸಿದ ದುಷ್ಯಂತ್ ಅದ್ದೂರಿಯಾಗಿಯೇ ವಿವಾಹವಾದರು. ನವ ಜೀವನಕ್ಕೆ ಒಂದಷ್ಟು ಕಾಲಾವಕಾಶ ನೀಡಿ ಮತ್ತೊಂದು ಹೊಸ ಚಿತ್ರದೊಂದಿಗೆ ಮರಳುವ ಸಿದ್ಧತೆ ನಡೆಸಿದ್ದಾರೆ. ಆದರೆ ಹನಿಮೂನ್ ಸಮಯದಲ್ಲೇ ಸಿನಿಮೀಯ ಘಟನೆಗಳಿಗೆ ಸಾಕ್ಷಿಯಾಗಿದ್ದಾರೆ. ದುಷ್ಯಂತ್ ಮಧುಚಂದ್ರಕ್ಕೆಂದು ತೆರಳಿದ್ದು ಪ್ಯಾರಿಸ್‌ಗೆ. ಆದರೆ ಇವರು ಅಲ್ಲಿರುವಾಗಲೇ ಒಂದು ಅನಿರೀಕ್ಷಿತ ಘಟನೆ ನಡೆದಿದೆ. ಬೆಲೆ ಏರಿಕೆ ಮತ್ತಿತರ ಕಾರಣಗಳಿಗಾಗಿ ಪ್ಯಾರಿಸ್‌ನಲ್ಲಿ ಬೃಹತ್ ಪ್ರತಿಭಟನೆ ಆರಂಭಗೊಂಡಿದೆ. ನವಜೋಡಿ ಪ್ಯಾರಿಸ್ ಸೇರಿ ಮೂರು ದಿನಗಳಷ್ಟೇ ಆಗಿತ್ತು. ಆಗಲೇ ಮೊಬೈಲ್ ಮೂಲಕ ಪ್ಯಾರಿಸ್‌ನಲ್ಲಿ ಈ ತರಹ ಪ್ರೊಟೆಸ್ಟ್ ಆಗ್ತಿರುವ ಸುದ್ದಿ ದುಷ್ಯಂತ್ ಅವರನ್ನು ತಲುಪಿತ್ತು. ಆದರೆ ಅದಾಗಲೇ ಡಿಸಿಲ್ಯಾಂಡ್‌ನಲ್ಲಿದ್ದು, ಸ್ವಿಟ್ಜರ್ ಇಟಲಿ ಪ್ರವಾಸ ಮುಗಿಸಿ ಮರಳಿದ್ದಾರೆ.

'ಪೊಲಿಮೇರ 3' ಚಿತ್ರದಲ್ಲಿ ಆಕ್ಷನ್ ಕಿಂಗ್ ಅರ್ಜುನ್ ಸರ್ಜಾ

ತೆಲುಗು ಚಿತ್ರರಂಗದಲ್ಲಿ ಅಪಾರ ಮೆಚ್ಚುಗೆ ಪಡೆದ ಮಿಸ್ಟಿಕ್ ಥ್ರಿಲ್ಲರ್ ಸರಣಿಯ ಬಹುನಿರೀಕ್ಷಿತ ಮೂರನೇ ಭಾಗ 'ಪೊಲಿಮೇರ 3' ಸಿನಿಮಾದಿಂದ ವಿಶೇಷ ಅಪ್‌ಡೇಟ್ ಹೊರಬಿದ್ದಿದೆ. ದೀಪಾವಳಿ ಹಬ್ಬದ ಸಂಭ್ರಮದಲ್ಲಿ ಚಿತ್ರತಂಡ ಪ್ರಮುಖ ಪಾತ್ರಧಾರಿಯ ಗ್ಲಿಂಪ್ಸ್ ಬಿಡುಗಡೆ ಮಾಡುವ ಮೂಲಕ ಪ್ರೇಕ್ಷಕರಲ್ಲಿ ಭಾರೀ ಕುತೂಹಲ ಮೂಡಿಸಿದೆ. ಬಹುಭಾಷಾ ನಟ, ಅಕ್ಷನ್ ಕಿಂಗ್ ಅರ್ಜುನ್ ಸರ್ಜಾ ಅವರು ಈ ಚಿತ್ರದಲ್ಲಿ 'ವಿರಾವಿ' ಎಂಬ ಶಕ್ತಿಶಾಲಿ ಹಾಗೂ ರೋಚಕ ಪಾತ್ರದಲ್ಲಿ ಕಾಣಿಸಿಕೊಂಡಿದ್ದು, ಅವರ ಮೊದಲ ನೋಟದ ಗ್ಲಿಂಪ್ಸ್ ಪ್ರೇಕ್ಷಕರನ್ನು ಆಕರ್ಷಿಸುತ್ತಿದೆ. ನಿರ್ದೇಶಕ ಡಾ. ಅನಿಲ್ ವಿಶ್ವನಾಥ್ ಈ ಬಾರಿ 'ಪೊಲಿಮೇರ' ಜಗತ್ತನ್ನು ಮತ್ತಷ್ಟು ವಿಶಾಲವಾಗಿ ಕಟ್ಟಿಕೊಡಲು ಸಜ್ಜಾಗಿದ್ದು, ಚಿತ್ರವನ್ನು ಕನ್ನಡ, ತೆಲುಗು, ತಮಿಳು ಹಾಗೂ ಮಲಯಾಳಂ ಭಾಷೆಗಳಲ್ಲಿ ಪ್ಯಾನ್–ಇಂಡಿಯಾ ಮಟ್ಟದಲ್ಲಿ ಚಿತ್ರಮಂದಿರಗಳಿಗೆ ತರಲು ಸಿದ್ಧತೆ ನಡೆಸಿದ್ದಾರೆ. ಬಿಡುಗಡೆಯಾಗಿರುವ ಗ್ಲಿಂಪ್ಸ್ ಅತ್ಯಂತ ನಿಗೂಢ ಹಾಗೂ ಅತೀಂದ್ರಿಯ ವಾತಾವರಣದೊಂದಿಗೆ ತೆರೆದುಕೊಳ್ಳುತ್ತದೆ. ದೇವಸ್ಥಾನದ ಕತ್ತಲೆಯ ಕೋಣೆಗಳು, ಅಮಾವಾಸ್ಯೆಯ ಕರಾಳ ರಾತ್ರಿ, ವಿಷ್ಣುವಿನಿಂದ ಶಿವನಿಗೆ ಬದಲಾಗುವ ವಿಸ್ಮಯಕಾರಿ ಪರಿವರ್ತನೆ ಮತ್ತು ಅನಂತ ಪದ್ಮನಾಭ ಸ್ವಾಮಿಯ ದೈವಿಕ ದರ್ಶನದ ದೃಶ್ಯಗಳು ವೀಕ್ಷಕರಿಗೆ ಮೈಜುಮ್ಮೆನಿಸುವ ಅನುಭವ ನೀಡುತ್ತವೆ.



'ಮೈ ಬೇಬಿ' ಮೊದಲ ಹಾಡಿಗೆ ಎ.ಆರ್. ರೆಹಮಾನ್ ಸಾಥ್

ರೊಮ್ಯಾಂಟಿಕ್ ಸಿನಿಮಾಗಳ ಮೂಲಕ ಮೋಡಿ ಮಾಡೋ ಪ್ರೀತಮ್ ಗುಬ್ಬಿ ನಿರ್ದೇಶನದ ಹೊಸ ಸಿನಿಮಾ 'ಮೈ ಬೇಬಿ' ಯಿಂದ ಒಂದು ಬಿಗ್ ಅಪ್ಡೇಟ್ ಬಂದಿದೆ. ಚಿತ್ರದ ಮೊದಲ ಸಾಂಗ್ 'ಮಾತು ನೀನೆ' ನವೆಂಬರ್ 11ರಂದು ರಿಲೀಸ್ ಆಗ್ತಿದೆ. ವಿಶೇಷ ಅಂದ್ರೆ, ಈ ರೊಮ್ಯಾಂಟಿಕ್ ಟ್ರ್ಯಾಕ್ ಅನ್ನು ಸಂಗೀತ ಮಾಂತ್ರಿಕ, ಆಸ್ಕರ್ ವಿನ್ನರ್ ಎ.ಆರ್. ರೆಹಮಾನ್ ಲಾಂಚ್ ಮಾಡ್ತಿದ್ದಾರೆ. ಗ್ಲೋಬಲ್ ಲೆವೆಲ್‌ನ ಮ್ಯೂಸಿಕ್ ಐಕಾನ್ ಕನ್ನಡದ ಹಾಡನ್ನು ರಿಲೀಸ್ ಮಾಡ್ತಿರೋದು ಇಡೀ ಟೀಮ್‌ಗೆ ಸಖತ್ ಖುಷಿ ತಂದಿದೆ. ಸುಂದರವಾದ ಹಿಲ್ಸ್ ಹಾಗೂ ನೇಚರ್ ವೈಬ್ಸ್ ನಡುವೆ ಸಾಗುವ ಈ ಮೆಲೋಡಿಗೆ ಯಂಗ್ ಮ್ಯೂಸಿಕ್ ಡೈರೆಕ್ಟರ್ ನಕುಲ್ ಅಭ್ಯಂಕರ್ ರಾಗ ಸಂಯೋಜಿಸಿದ್ದಾರೆ. ನಾಗಾರ್ಜುನ್ ಶರ್ಮಾ ಅವರ ಸೂಪರ್ ಲಿರಿಕ್ಸ್‌ಗೆ ಜಸ್ಕಿರಣ್ ಸಿಂಗ್ ವಾಯ್ಸ್ ಕೊಟ್ಟಿದ್ದು, ಕೇಳುಗರಲ್ಲಿ ಇನ್ಸ್ಟಂಟ್ ವೈಬ್ ಕ್ರಿಯೇಟ್ ಮಾಡೋ ಎಲ್ಲಾ ಲಕ್ಷಣಗಳಿವೆ.




ಹೊಸ ವರ್ಷದ ಆರಂಭದಲ್ಲೇ ಹೊಸ ಚಿತ್ರದ ಮುಹೂರ್ತ

ದೀಪಾವಳಿ ಹಬ್ಬದ ಸಂಭ್ರಮದ ನಡುವೆಯೇ ಕನ್ನಡ ಚಿತ್ರರಂಗಕ್ಕೆ ಸೂರಜ್ ಪ್ರೊಡಕ್ಷನ್ಸ್ ಸಂಸ್ಥೆಯಿಂದ ಸಿಹಿಸುದ್ದಿಯೊಂದು ಹೊರಬಿದ್ದಿದೆ. ಸದಭಿರುಚಿಯ ಹಾಗೂ ವಿಭಿನ್ನ ಕಥಾಹಂದರದ ಚಿತ್ರಗಳ ಮೂಲಕ ಕನ್ನಡ ಚಿತ್ರರಂಗದಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ರಾಷ್ಟ್ರ ಪ್ರಶಸ್ತಿ ವಿಜೇತ ನಿರ್ಮಾಪಕ ರಮೇಶ್ ರೆಡ್ಡಿ ಅವರು ಮತ್ತೊಂದು ಹೊಸ ಚಿತ್ರ ನಿರ್ಮಾಣಕ್ಕೆ ಸಜ್ಜಾಗಿದ್ದಾರೆ. ಸೂರಜ್ ಪ್ರೊಡಕ್ಷನ್ಸ್‌ನ ನೂತನ ಚಿತ್ರ 'ಪ್ರೊಡಕ್ಷನ್ ನಂಬರ್ 9' 2027ರ ಜನವರಿಯಲ್ಲಿ ಆರಂಭವಾಗಲಿದೆ. ನಿರ್ಮಾಪಕ ರಮೇಶ್ ರೆಡ್ಡಿ ಅವರ ಹುಟ್ಟುಹಬ್ಬದ ವಿಶೇಷ ಸಂದರ್ಭದಲ್ಲಿ ಹಾಗೂ ದೀಪಾವಳಿ ಹಬ್ಬದ ಶುಭ ಸಂದರ್ಭದಲ್ಲಿ ಈ ಸಂತಸದ ಸುದ್ದಿಯನ್ನು ಸೂರಜ್ ಪ್ರೊಡಕ್ಷನ್ಸ್ ಸಂಸ್ಥೆ ಅಧಿಕೃತವಾಗಿ ಪ್ರಕಟಿಸಿದೆ. ಹುಟ್ಟುಹಬ್ಬದ ಸಂಭ್ರಮಕ್ಕೆ ವಿಶೇಷ ಟೀಸರ್ ಬಿಡುಗಡೆ. ರಮೇಶ್ ರೆಡ್ಡಿ ಅವರ ಹುಟ್ಟುಹಬ್ಬದ ಪ್ರಯುಕ್ತ ಸೂರಜ್ ಪ್ರೊಡಕ್ಷನ್ಸ್‌ನ ಮುಂದಿನ ಚಿತ್ರ 'ಪ್ರೊಡಕ್ಷನ್ ನಂಬರ್ 9' ಕುರಿತಾದ ವಿಶೇಷ ಟೀಸರ್‌ವೊಂದನ್ನೂ ಬಿಡುಗಡೆ ಮಾಡಲಾಗಿದೆ.



'ಸಂಡಿಯಾರ್' ಶೀರ್ಷಿಕೆ, ಫಸ್ಟ್ ಲುಕ್ ಪೋಸ್ಟರ್ ಅನಾವರಣ

ಬಹುಭಾಷಾ ನಟ ಕಮಲ್ ಹಾಸನ್ ತಮ್ಮ 73ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದು, ಈ ವಿಶೇಷ ಸಂದರ್ಭದಲ್ಲಿ ಅಭಿಮಾನಿಗಳಿಗೆ



ಭರ್ಜರಿ ಉಡುಗೊರೆ ನೀಡಿದ್ದಾರೆ. ಅವರ ಬಹುನಿರೀಕ್ಷಿತ ಮುಂದಿನ ಚಿತ್ರಕ್ಕೆ 'ಸಂಡಿಯಾರ್' ಎಂದು ನಾಮಕರಣ ಮಾಡಲಾಗಿದ್ದು, ಚಿತ್ರದ ಆಕರ್ಷಕ ಫಸ್ಟ್ ಲುಕ್ ಪೋಸ್ಟರ್ ಅನ್ನು ಶುಕ್ರವಾರ ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ. ಕಮಲ್ ಹಾಸನ್ ಅವರ ಸ್ವಂತ ನಿರ್ಮಾಣ ಸಂಸ್ಥೆಯಾದ 'ರಾಜ್ ಕಮಲ್ ಫಿಲ್ಮ್ಸ್ ಇಂಟರ್‌ನ್ಯಾಷನಲ್' ಈ ಶೀರ್ಷಿಕೆಯನ್ನು ಅನಾವರಣಗೊಳಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹೊಸ ಅಲೆ ಎಬ್ಬಿಸಿದೆ. ಚಿತ್ರತಂಡ ಹಂಚಿಕೊಂಡಿರುವ ಫಸ್ಟ್ ಲುಕ್ ಪೋಸ್ಟರ್‌ನಲ್ಲಿ ಕಮಲ್ ಹಾಸನ್ ಅತ್ಯಂತ ರಗಡ್ ಹಾಗೂ ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ವಾಹನವೊಂದರ ಪಕ್ಕದಲ್ಲಿ ನಿಂತು, ಅದರ ಕಿಟಕಿಯ ಮೂಲಕ ಒರಗಿಕೊಂಡು ಕೈಯಲ್ಲಿ ಪಿಸ್ತೂಲ್ ಹಿಡಿದಿರುವ ಅವರ ಖಡಕ್ ಶೈಲಿ ಪ್ರೇಕ್ಷಕರ ಕುತೂಹಲವನ್ನು ಇಮ್ಮಡಿಗೊಳಿಸಿದೆ.

ಹೊಂಬಾಳೆಯಲ್ಲಿ 'ದೇವಿ ಮಹಾತ್ಮೆ' 'ಎದೆ ಸುಡುತಿದೆ ಗಾಯ' ವಿಡಿಯೋ ಸಾಂಗ್

ಕನ್ನಡ ಚಿತ್ರರಂಗದ ಖ್ಯಾತ ನಟ ರಂಗಾಯಣ ರಘು ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿರುವ ಬಹುನಿರೀಕ್ಷಿತ 'ದೇವಿ ಮಹಾತ್ಮೆ' ಚಿತ್ರದ 'ಎದೆ ಸುಡುತಿದೆ ಗಾಯ' ಎಂಬ ಭಾವಪೂರ್ಣ ವಿಡಿಯೋ ಸಾಂಗ್ ಇದೀಗ ಹೊಂಬಾಳೆ ಮ್ಯೂಸಿಕ್ ಯೂಟ್ಯೂಬ್ ಚಾನೆಲ್‌ನಲ್ಲಿ ಬಿಡುಗಡೆಯಾಗಿದ್ದು, ಸೋಷಿಯಲ್ ಮೀಡಿಯಾದಲ್ಲಿ ಸದ್ದು ಮಾಡುತ್ತಿದೆ. ತನ್ನ ಗಾಢವಾದ ಭಾವನೆಗಳು ಹಾಗೂ ವಿಶಿಷ್ಟ ಸಂಯೋಜನೆಯಿಂದ ಗಮನ ಸೆಳೆಯುತ್ತಿರುವ ಈ ಗೀತೆಯಲ್ಲಿ, ಖ್ಯಾತ ಗಾಯಕಿ ಅನನ್ಯಾ ಭಟ್ ಅವರೇ ಖುದ್ದಾಗಿ ಕಾಣಿಸಿಕೊಂಡು ಅಭಿನಯಿಸಿರುವುದು ಈ ಹಾಡಿನ ಪ್ರಮುಖ ಆಕರ್ಷಣೆಯಾಗಿದೆ. ಬಿಡುಗಡೆಯಾದ ಕೆಲವೇ ಸಮಯದಲ್ಲಿ ಅಪಾರ ವೀಕ್ಷಕರನ್ನು ಸೆಳೆದಿರುವ ಈ ಹಾಡು, ಚಿತ್ರದ ಕಥಾಹಂದರದ ಕುತೂಹಲ ಹಾಗೂ ನಿರೀಕ್ಷೆಗಳನ್ನು ದುಪ್ಪಟ್ಟುಗೊಳಿಸಿದೆ.



ನಗಿಸಲು, ಮನರಂಜಿಸಲು ಬರುತ್ತಿದ್ದಾನೆ 'ಮಿಸ್ಟರ್ ಜಾಕ್'

'ಫಸ್ಟ್ ರ್ಯಾಂಕ್ ರಾಜು' ಚಿತ್ರದ ಮೂಲಕ ಕನ್ನಡ ಪ್ರೇಕ್ಷಕರ ಮನಗೆದ್ದಿರುವ ಗುರುನಂದನ್



ಹಾಗೂ 'ಪ್ರೇಮದ ಊರಲಿ' ಚಿತ್ರದ ಮೂಲಕ ಪ್ರೇಕ್ಷಕರ ಮನಸ್ಸಿನಲ್ಲಿ ಸ್ಥಾನ ಪಡೆದಿರುವ ತಪಸ್ವಿನಿ ಪೂಣಚ್ಚ ನಾಯಕ–ನಾಯಕಿಯಾಗಿ ನಟಿಸಿರುವ ಬಹುನಿರೀಕ್ಷಿತ ಚಿತ್ರ 'ಮಿಸ್ಟರ್ ಜಾಕ್'. ಇವರಿಬ್ಬರ ವಿಭಿನ್ನ ಅಭಿನಯದ ಮೋಡಿ, ಹಾಸ್ಯ ಹಾಗೂ ಮನರಂಜನೆಯ ಸಮ್ಮಿಲನದೊಂದಿಗೆ ಮೂಡಿಬಂದಿರುವ ಈ ಚಿತ್ರ ಪ್ರೇಕ್ಷಕರಿಗೆ ನಗುವಿನ ಹಬ್ಬ ನೀಡಲು ಸಜ್ಜಾಗಿದೆ. ಮಂಡಿಮನೆ ಟಾಕೀಸ್ ಲಾಂಛನದಲ್ಲಿ ನಟ ಗುರುನಂದನ್ ಅವರು ತಮ್ಮ ಸ್ನೇಹಿತರೊಡಗೂಡಿ ನಿರ್ಮಿಸಿರುವ ಈ ಚಿತ್ರಕ್ಕೆ ಸುಮಂತ್ ನಿರ್ದೇಶನ ಮಾಡಿದ್ದಾರೆ. ಚಿತ್ರದ ಆರಂಭದಿಂದಲೂ ಟೀಸರ್ ಹಾಗೂ ಹಾಡುಗಳ ಮೂಲಕ 'ಮಿಸ್ಟರ್ ಜಾಕ್' ಸಾಕಷ್ಟು ಕುತೂಹಲ ಮೂಡಿಸಿದೆ. ಗಣಪತಿ ಹಬ್ಬದ ಸಂದರ್ಭದಲ್ಲಿ ಬಿಡುಗಡೆಯಾದ ಚಿತ್ರದ ಮೊದಲ ಹಾಡು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಗಿತ್ತು.



ಕರಾವಳಿ ತರಂಗಿಣಿ

ಸಿನಿ ತರಂಗಿಣಿ

ವಿಭಿನ್ನ ಕಥಾಹಂದರದ "ಕ್ವಾಂಟ"

ಐದು ದಶಕಗಳ ಸಾರ್ಥಕ ಸಿನಿಮಾ ಪಯಣಕ್ಕೆ 'ಕಾಸರವಳ್ಳಿ @ 50' ಗೌರವದ ಸಂಭ್ರಮ..



'ಕನ್ನಡ ಚಿತ್ರರಂಗದ ಹೆಮ್ಮೆಯ ಹಿರಿಯ ನಿರ್ದೇಶಕ ಡಾ. ಗಿರೀಶ್ ಕಾಸರವಳ್ಳಿ ಅವರು ಚಿತ್ರರಂಗಕ್ಕೆ ಸಲ್ಲಿಸಿರುವ ಐದು ದಶಕಗಳ ಅಮೂಲ್ಯ ಕೊಡುಗೆಯನ್ನು ಗೌರವಿಸುವ ನಿಟ್ಟಿನಲ್ಲಿ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಯ ವತಿಯಿಂದ ಡಿಸೆಂಬರ್ 3, 4 ಮತ್ತು 5ರಂದು ಮೂರು ದಿನಗಳ ವಿಶೇಷ ಅಭಿನಂದನಾ ಸಮಾರಂಭವನ್ನು ಆಯೋಜಿಸಲಾಗಿದೆ. ಮಣಿರತ್ನಂ, ಅನುರಾಗ್ ಕಶ್ಯಪ್, ರಸೂಲ್ ಪೂಕುಟ್ಟಿ ಸೇರಿದಂತೆ ಹಲವು ಗಣ್ಯರು ಭಾಗಿಯಾಗಲಿದ್ದಾರೆ. 'ಘಟಶ್ರಾದ್ಧ' ಸೇರಿದಂತೆ ಐದು ಚಿತ್ರಗಳ ಪ್ರದರ್ಶನ, ಮಾಸ್ಟರ್ ಕ್ಲಾಸ್, ಸಂವಾದ ಹಾಗೂ ವಿಚಾರ ಸಂಕಿರಣಗಳ ಆಯೋಜನೆ. ಕಾಸರವಳ್ಳಿ@50' ಹೆಸರಿನಲ್ಲಿ ನಡೆಯಲಿರುವ ಈ ವಿಶೇಷ ಕಾರ್ಯಕ್ರಮಕ್ಕೆ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷ ಕೃಷ್ಣೇಗೌಡರು ಸಾರಥ್ಯ ವಹಿಸಿದ್ದಾರೆ. ಈ ಕುರಿತು ಮಾತನಾಡಿದ ಕೃಷ್ಣೇಗೌಡರು, ಹಿರಿಯ ನಿರ್ದೇಶಕರನ್ನು ಕೇವಲ ಒಂದು ದಿನದ ಸನ್ಮಾನಕ್ಕೆ ಸೀಮಿತ ಗೊಳಿಸದೆ, ಅವರ ಸಿನಿಮಾಗಳು, ಸಾಧನೆ, ಸಿನಿಮಾ ಭಾಷೆ ಮತ್ತು ಚಿಂತನೆಗಳನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ಈ ಕಾರ್ಯಕ್ರಮದ ಮುಖ್ಯ ಉದ್ದೇಶ. ಕಳೆದ ವರ್ಷ ಹಿರಿಯ ನಿರ್ದೇಶಕ ರಾಜೇಂದ್ರ ಸಿಂಗ್ ಬಾಬು ಅವರ ಅಭಿನಂದನಾ ಕಾರ್ಯಕ್ರಮವನ್ನು ಯಶಸ್ವಿಯಾಗಿ ಆಯೋಜಿಸಲಾಗಿತ್ತು. ಪ್ರತಿವರ್ಷವೂ ಹಿರಿಯ ನಿರ್ದೇಶಕರನ್ನು ಆಯ್ಕೆ ಮಾಡಿ ಗೌರವಿಸಲಾಗುವುದು ಎಂದು ತಿಳಿಸಿದರು.



ದಿನೇಶ್ ಬಾಬು ನಿರ್ದೇಶನದಲ್ಲಿ 'ಅಮೃತವರ್ಷಿಣಿ 2'

ಬಿ.ಎಸ್. ಸುಧೀಂದ್ರ ಹಾಗೂ ಆರ್. ನವೀನ್ ನಿರ್ಮಾಣದಲ್ಲಿ, ದಿನೇಶ್ ಬಾಬು ನಿರ್ದೇಶನದಲ್ಲಿ 'ಅಮೃತವರ್ಷಿಣಿ 2' ಚಿತ್ರ ಮೂಡಿಬರಲು ಸಜ್ಜಾಗುತ್ತಿದೆ. 1997ರಲ್ಲಿ ತೆರೆಕಂಡು ಅಪಾರ ಜನಮನ್ನಣೆ ಗಳಿಸಿದ್ದ ರಮೇಶ್ ಅರವಿಂದ್, ಸುಹಾಸಿನಿ ಹಾಗೂ ಶರತ್ ಬಾಬು ಅಭಿನಯದ, ದಿನೇಶ್ ಬಾಬು ನಿರ್ದೇಶನದ 'ಅಮೃತವರ್ಷಿಣಿ' ಚಿತ್ರದ ಮುಂದುವರಿದ ಭಾಗ ಇದಾಗಿದೆ. ಜನವರಿ 14ರ ಸಂಕ್ರಾಂತಿಯ ಶುಭ ಸಂದರ್ಭದಲ್ಲಿ ಚಿತ್ರದ ಚಿತ್ರೀಕರಣ ಆರಂಭವಾಗಲಿದ್ದು, ಕೊಡೈಕೆನಾಲ್ ಹಾಗೂ ಬೆಂಗಳೂರಿನಲ್ಲಿ ಚಿತ್ರೀಕರಣ ನಡೆಯಲಿದೆ. ಕನ್ನಡ ಚಿತ್ರರಂಗದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದ 'ಅಮೃತವರ್ಷಿಣಿ' ಚಿತ್ರ ಇಂದಿಗೂ ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೆ ನೆನಪಾಗಿ ಉಳಿದಿದೆ. ಎರಡನೇ ಭಾಗದಲ್ಲೂ ಮೂಲ ಚಿತ್ರದ ಪ್ರಮುಖ ಕಲಾವಿದರಾದ ರಮೇಶ್ ಅರವಿಂದ್ ಹಾಗೂ ಸುಹಾಸಿನಿ ಅಭಿನಯಿಸುತ್ತಿರುವುದು ವಿಶೇಷ.



ಎಸ್. ನಾರಾಯಣ್ ನೂತನ ಚಿತ್ರ ಸದ್ಯದಲ್ಲೇ ಆರಂಭ..

ಕನ್ನಡ ಚಿತ್ರರಂಗಕ್ಕೆ ಸದಭಿರುಚಿಯ, ಮನ ಮುಟ್ಟುವ ಹಾಗೂ ವಿಭಿನ್ನ ಕಥಾಹಂದರದ ಹಲವು ಯಶಸ್ವಿ ಚಿತ್ರಗಳನ್ನು ನೀಡಿರುವ ಕಲಾಸಾಮ್ರಾಟ್ ಡಾ. ಎಸ್. ನಾರಾಯಣ್ ಅವರ ನೂತನ ಚಿತ್ರ ಸದ್ಯದಲ್ಲೇ ಆರಂಭವಾಗಲಿದೆ. ಕನ್ನಡ ಚಿತ್ರರಂಗದ ಮೇರು ನಟರಾದ ಡಾ. ರಾಜ್‌ಕುಮಾರ್, ಡಾ. ವಿಷ್ಣುವರ್ಧನ್, ಅಂಬರೀಶ್ ಸೇರಿದಂತೆ ಹಲವು ಪ್ರಮುಖ ನಾಯಕ ನಟರ ಚಿತ್ರಗಳನ್ನು ನಿರ್ದೇಶಿಸಿರುವ ಹೆಗ್ಗಳಿಕೆ ಡಾ. ಎಸ್. ನಾರಾಯಣ್ ಅವರದ್ದು, ನಿರ್ದೇಶಕರಾಗಿ ಮಾತ್ರವಲ್ಲದೆ, ನಿರ್ಮಾಪಕರಾಗಿ ಹಾಗೂ ಕಲಾವಿದರಾಗಿಯೂ ತಮ್ಮದೇ ಆದ ಪ್ರತಿಭೆಯನ್ನು ಸಾಬೀತುಪಡಿಸಿರುವ ಅವರು, ಕನ್ನಡ ಚಿತ್ರರಂಗದಲ್ಲಿ ವಿಶಿಷ್ಟ ಸ್ಥಾನ ಗಳಿಸಿದ್ದಾರೆ. ಅಪಾರ ಅಭಿಮಾನಿಗಳನ್ನು ಸಂಪಾದಿಸಿರುವ ಕಲಾಸಾಮ್ರಾಟ್ ಡಾ. ಎಸ್. ನಾರಾಯಣ್, ಇದೀಗ ಮತ್ತೊಂದು ವಿಭಿನ್ನ ಕಥೆಯನ್ನು ಪ್ರೇಕ್ಷಕರ ಮುಂದೆ ತರಲು ಸಿದ್ಧತೆ ನಡೆಸಿದ್ದಾರೆ.







KARAVALI THARANGINI Weekly Owned, Editor, Published & Printed by Lalithasri Preetham Rai No.2-64/54(12), Pushparaj Nilaya, Jayanagara, 3rd 'A' Maroli Village, Dakshina Kannada, Karnataka - 575005.
email: karavalitharangini@gmail.com, web: karavalitharangini.com ph: 9880109212 Printed at Bhima Samskruthi Printers & Publishers, No 1182 14th Main Road Prakash Nagar, Bengaluru Karnataka-560021